ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವ□□, □□□□□ 22, 2024

ಸಂಪುಟ : 51 ಸಂಚಿಕೆ : 69 ( 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ನಗರದಲ್ಲಿ ಸಂಭ್ರಮದ ಗುರು ಪೂರ್ಣಿಮೆ



### ತುಂತುರು ಮಳೆಯ ನಡುವೆಯೂ ಭಕ್ತಿ ನಮನ

ದಾವಣಗೆರೆ, ಜು. 21 - ನಗರದಲ್ಲಿ ಭಾನುವಾರ ಶ್ರದ್ಧಾ ಭಕ್ತಿಯಿಂದ ಗುರು ಪೂರ್ಣಿಮೆ ಆಚರಿಸಲಾಯಿತು. ಮಠ ಹಾಗೂ ದೇವಾಲಯಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ, ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆದವು. ತುಂತುರು ಮಳೆಯ ನಡುವೆಯೇ ಭಕ್ತಾದಿಗಳು ತಮ್ಮ ಗುರುವಿಗೆ ಭಕ್ತಿ ನಮನ ಸಲ್ಲಿಸಿದರು.

ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಡೆದ ಗುರು ಪೂರ್ಣಿಮೆಯಲ್ಲಿ ಉದ್ಯಮಿ ಎಸ್.ಎಸ್. ಗಣೇಶ್ ಹಾಗೂ ಪತ್ನಿ ಶ್ರೀಮತಿ ರೇಖಾ ಗಣೇಶ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಬೆಳಿಗ್ಗೆ ಶ್ರೀ ಬಾಬಾರವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಸಾಯಿ ಸತ್ಯನಾರಾಯಣ ಪೂಜೆ ನೆರವೇರಿಸಲಾಯಿತು. ರಾತ್ರಿ ಪಾಲಕಿ ಉತ್ಸವ, ಧುನಿ ಪೂಜೆ, ಶೇಜಾರತಿ ಮುಂತಾದ ಪೂಜಾ ವಿಧಿಗಳನ್ನು ನೆರವೇರಿಸಲಾಯಿತು. ಸಾರ್ವಜನಿಕರು ಬೆಳ್ಳಿ ಮೂರ್ತಿಗೆ ಹಾಲಿನ ಅಭಿಷೇಕ ಮಾಡಲು ಅವಕಾಶ ನೀಡಲಾಗಿತ್ತು.

ಪಿ.ಜೆ. ಬಡಾವಣೆ ಹಾಗೂ ಕೊಂಡಜ್ಜಿ ರಸ್ತೆಯ ವಿಜಯ ನಗರ ಬಡಾವಣೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗ (4ನೇ ಪುಟಕ್ಕೆ)

## ಬಾಂಗ್ಲಾ : ಮೀಸಲಾತಿ ತಗ್ಗಿಸಿದ ಸುಪ್ರೀಂ

### ವಿದ್ಯಾರ್ಥಿಗಳ ಹಿಂಸಾತ್ಮಕ ಪ್ರತಿಭಟನೆ ನಡುವೆ ಕ್ರಮ

ಢಾಕಾ, ಜು. 21 - ಬಾಂಗ್ಲಾದೇಶದ ಸರ್ಕಾರಿ ಹುದ್ದೆಗಳಲ್ಲಿ ಕಲ್ಪಿಸಲಾಗಿರುವ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಭಾನುವಾರದಂದು ತಗ್ಗಿಸಿದೆ. ವಿದ್ಯಾರ್ಥಿಗಳು ದೇಶಾದ್ಯಂತ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿರುವ ಮಧ್ಯೆ ಈ ಬೆಳವಣಿಗೆಯಾಗಿದೆ.

1971ರ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡವರ ಕುಟುಂಬಗಳಿಗೆ ಶೇ.30 ರಷ್ಟು ಮೀಸಲಾತಿ ಕಲ್ಪಿಸುವುದನ್ನು ವಿರೋಧಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು.

2018ರಲ್ಲಿ ಬಾಂಗ್ಲಾ ಸರ್ಕಾರ ಈ ಮೀಸಲಾತಿಗೆ ತಡೆ ಹಾಕಿತ್ತು. ಆದರೆ ಕಳೆದ ಜೂನ್ ತಿಂಗಳಲ್ಲಿ ಬಾಂಗ್ಲಾದೇಶ ಹೈಕೋರ್ಟ್ ಮೀಸಲಾತಿ ಮತ್ತೆ ನೆಲೆಗೊಳಿಸಿತ್ತು. ನಂತರದಲ್ಲಿ ದೇಶಾದ್ಯಂತ ಪ್ರತಿಭಟನೆಗಳು ಭುಗಿಲೆದ್ದಿದ್ದವು. ಈ ನಡುವೆ, ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಭಾನುವಾರ ಮೀಸಲಾತಿ ಬಗ್ಗೆ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರ ಕುಟುಂಬದವರಿಗೆ ನೀಡಲಾಗುವ ಮೀಸಲಾತಿಯನ್ನು ಶೇ. 5ಕ್ಕೆ ಇಳಿಸಿದೆ. ಜನಾಂಗೀಯ ಅಲ್ಪಸಂಖ್ಯಾತರು, ತೃತೀಯ ಲಿಂಗಿಗಳು ಹಾಗೂ ಅಂಗವಿಕಲರಿಗೆ ಶೇ.2ರಷ್ಟು ಮೀಸಲಾತಿ ನೀಡಲಾಗುವುದು. ಶೇ. 93ರಷ್ಟು ಹುದ್ದೆಗಳು ಸಾಮಾನ್ಯ ವರ್ಗದವರಿಗೆ ಲಭ್ಯವಿರಲಿವೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಪ್ರಧಾನಮಂತ್ರಿ ಶೇಖ್ ಹಸೀನಾ ಅವರು ನಾಲ್ಕನೇ ಅವಧಿಗೆ ಅಧಿಕಾರ ವಹಿಸಿಕೊಂಡ ನಂತರ ವಿದ್ಯಾರ್ಥಿಗಳ ಪ್ರತಿಭಟನೆ ಪ್ರಮುಖ ಸವಾಲಾಗಿತ್ತು. ಪ್ರತಿಭಟನೆಯ ನಂತರ ವಿಶ್ವವಿದ್ಯಾಲಯಗಳನ್ನು ಮುಚ್ಚಲಾಗಿತ್ತು, ಅಂತರ್ಜಾಲ ಸೇವೆ ಸ್ಥಗಿತಗೊಳಿಸಲಾಗಿತ್ತು ಹಾಗೂ ಜನರು ಮನೆಯಲ್ಲೇ ಇರಬೇಕೆಂದು ತಿಳಿಸಿತ್ತು.

ಹಲವು ವಾರಗಳಿಂದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದರು. ಆದರೆ ಕಳೆದ ಗುರುವಾರ ಹಿಂಸಾಚಾರ ಆರಂಭವಾಗಿತ್ತು. ಹಿಂಸಾಚಾರದಲ್ಲಿ ಮೃತರ ಸಂಖ್ಯೆ ಎಷ್ಟು ಎಂಬುದನ್ನು ಸರ್ಕಾರ ಬಹಿರಂಗಪಡಿಸಿಲ್ಲ. ಆದರೆ, ಮೃತರ ಸಂಖ್ಯೆ 100ಕ್ಕೂ ಹೆಚ್ಚು ಎಂದು ಸ್ಥಳೀಯ ಪತ್ರಿಕೆಗಳು ವರದಿ ಮಾಡಿವೆ.

### ಬಾಂಗ್ಲಾ ಹಿಂಸಾಚಾರ : ಪರಿಸ್ಥಿತಿ ಎದುರಿಸಲು ಬಿಎಸ್‌ಎಫ್ ಸನ್ನದ್ಧ

ಅಗರ್ತಲ, ಜು. 21 - ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ವ್ಯಾಪಕ ಹಿಂಸಾಚಾರಕ್ಕೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿರುವುದಾಗಿ ಗಡಿ ಭದ್ರತಾ ಪಡೆ ತಿಳಿಸಿದೆ.

ಬಾಂಗ್ಲಾದಲ್ಲಿ ಮೀಸಲಾತಿ ವಿರೋಧಿ ಹೋರಾಟದಿಂದ ನೂರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಹಾಗೂ ದೇಶಾದ್ಯಂತ ಕರ್ಫ್ಯೂ ವಿಧಿಸಲಾಗಿದೆ.

ಬಾಂಗ್ಲಾದೇಶದಲ್ಲಿ ಉಂಟಾಗಿರುವ ಪರಿಸ್ಥಿತಿ ರಕ್ಷಣಾ ವ್ಯವಸ್ಥೆಗೆ ಕಳವಳ ತಂದಿದೆ. ನಾವು ಪರಿಸ್ಥಿತಿಯ ಮೇಲೆ ನಿಗಾವಹಿಸಿದ್ದೇವೆ ಹಾಗೂ ಭದ್ರತೆ ಹೆಚ್ಚಿಸಿದ್ದೇವೆ. ಪರಿಸ್ಥಿತಿಯ ದುರ್ಲಾಭ ಪಡೆದು ಅಪರಾಧಿಕ ಶಕ್ತಿಗಳು ಗಡಿ ದಾಟದಂತೆ ಎಚ್ಚರ ವಹಿಸಿದ್ದೇವೆ ಎಂದು ಗಡಿ ಭದ್ರತಾ ಪಡೆಯ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

### 4,500 ವಿದ್ಯಾರ್ಥಿಗಳು ವಾಪಾಸ್

ನವದೆಹಲಿ, ಜು. 21 - ಹಿಂಸಾ ಪೀಡಿತ ಬಾಂಗ್ಲಾದೇಶದಿಂದ 4,500ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ವಾಪಸ್ಸಾಗಿದ್ದಾರೆ. ನೇಪಾಳದ 500, ಭೂತಾನದ 38 ಹಾಗೂ ಮಾಲ್ಡಿವ್ಸ್‌ನ ಒಬ್ಬರು ಸಹ ಭಾರತಕ್ಕೆ ಬಂದಿರುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಬಾಂಗ್ಲಾ ದೇಶದಲ್ಲಿ ಭಾರತದ ರಾಯಭಾರಿ ಕಚೇರಿಗಳು ನಿರಂತರವಾಗಿ ಸ್ಥಳೀಯ ಅಧಿಕಾರಿಗಳ ಸಂಪರ್ಕದಲ್ಲಿದ್ದು, ಭಾರತೀಯರ ರಕ್ಷಣೆ ಬಗ್ಗೆ ನಿಗಾವಹಿಸಿವೆ ಎಂದು ಸಚಿವಾಲಯ ಹೇಳಿದೆ.

## ಭದ್ರಾ ಸೋರಿಕೆ ತಡೆಗೆ ಆಗ್ರಹಿಸಿ 24ರಂದು ಹೆದ್ದಾರಿ ಬಂದ್



ದಾವಣಗೆರೆ, ಜು.21- ಭದ್ರಾ ಜಲಾಶಯದ ದುರಸ್ತಿ ಹಾಗೂ ನೀರು ಸೋರಿಕೆ ತಡೆಯಲು ಆಗ್ರಹಿಸಿ ಎಸ್.ಎ. ರವೀಂದ್ರನಾಥ್ ಅವರ ನೇತೃತ್ವದಲ್ಲಿ ಇದೇ ದಿನಾಂಕ 24ರ ಬುಧವಾರ ಬೆಳಗ್ಗೆ 11ಕ್ಕೆ ಬಾಡಾ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವುದಾಗಿ ಮಾಜಿ ಶಾಸಕ ರೇಣುಕಾಚಾರ್ಯ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಸರ್ಕ್ಯೂಟ್ ಹೌಸ್‌ನಲ್ಲಿ ಇಂದು ಸಂಜೆ ನಡೆದ ರೈತ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಹಲವು ಮುಖಂಡರ ಸಮ್ಮುಖದಲ್ಲಿ ಅವರು ಮಾತನಾಡಿದರು.

ಈ ಹಿಂದೆ ದುರಸ್ತಿಗೊಳಿಸಿದ ಜಲಾಶಯದ ಗೇಟಿನಿಂದ ಮತ್ತೆ ನೀರು ಸೋರಿಕೆ ಕಂಡು ಬರುತ್ತಿದ್ದು, ಸರ್ಕಾರವು ಜಲಾಶಯದ ಸುರಕ್ಷತೆಗಾಗಿ 100 ಕೋಟಿ ಹಣ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ತುರ್ತುಗೇಟ್‌ಗೆ ಕಾಂಕ್ರಿಟ್ ಹಾಕುವುದು, ಸ್ಲೂಯಿಸ್ ಗೇಟಿನ ನೀರು ಸೋರಿಕೆ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ತಕ್ಷಣವೇ ಭದ್ರಾ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ಕರೆಯಬೇಕೆಂದು ಒತ್ತಾಯಿಸಿದರು.

ನಾಲೆಗಳಲ್ಲಿ ಜಂಗಲ್ ಬೆಳೆದು ಹೂಳು ತುಂಬಿಕೊಂಡಿದ್ದನ್ನು ಸರಿಪಡಿಸುವ ಜತೆಗೆ ಸಕಾಲಕ್ಕೆ ಜಲಾಶಯದಿಂದ ನೀರು ಪೂರೈಸುವಂತೆ ನೋಡಿಕೊಳ್ಳಬೇಕೆಂದು ಬೇಡಿಕೆ ಇಟ್ಟರು. ಭದ್ರಾ ಉಳಿವಿಗಾಗಿ ನಮ್ಮ ಬಲಿಷ್ಠ ಹೋರಾಟ ಸರ್ಕಾರದ ಗಮನ ಸೆಳೆಯಬೇಕು. ಈ ನಿಟ್ಟಿನಲ್ಲಿ ರೈತರೆಲ್ಲರೂ ಬಹು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ರೈತ ಮುಖಂಡ ಸತೀಶ್ ಕೊಳೇನಹಳ್ಳಿ ಮಾತನಾಡಿ, ಭದ್ರಾ ಜಲಾಶಯದ ವಿಚಾರವಾಗಿ ಸಾಕಷ್ಟು ಬಾರಿ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಿಸಿದ (2ನೇ ಪುಟಕ್ಕೆ)



ಚಿತ್ರ : ಬಗಳಿ ಪ್ರಕಾಶ್

### ಮುಂಗಾರು ನಾಟಿ ಆರಂಭ....

ಹರಿಹರ ತಾಲ್ಲೂಕಿನ ತುಂಗಭದ್ರಾ ನದಿ ಪಾತ್ರದ ಹಳ್ಳಿಗಳಲ್ಲಿ ಮುಂಗಾರು ಹಂಗಾಮಿನ ಭತ್ತದ ನಾಟಿ ಮಾಡುವ ಕಾರ್ಯ ಭರದಿಂದ ಸಾಗಿದ್ದು, ಭಾನುವಾರ ಕೆ ಎನ್ ಹಳ್ಳಿ -ವಾಸನ ನಡುವೆ ಗದ್ದೆಗಳಲ್ಲಿ ರೈತರು ಜಿಟಿಜಿಟಿ ಮಳೆಯ ನಡುವೆಯೂ ನಾಟಿ ಮಾಡುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು. ದೇವರಬೆಳಕೆರೆ ಪಿಕಪ್ ಡ್ಯಾಮ್ ವ್ಯಾಪ್ತಿಯ ಜರೆಕಟ್ಟೆ, ಮುದಹದಡಿ, ದೇವರಬೆಳಕೆರೆ, ಕುಣೆಬೆಳಕೆರೆ, ಬೂದಿಹಾಳ್, ಸಂಕ್ಲೀಪುರ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲೂ ಸಹ ಭತ್ತದ ನಾಟಿ ಆರಂಭಿಸಿದ್ದಾರೆ.

## 2 ಬೆಳೆಗೆ ನೀರು ಕೊಡುವುದು ಅಧಿಕಾರಿಗಳ ಹೊಣೆ



ದಾವಣಗೆರೆ, ಜು. 21 - ಭದ್ರಾ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರು ಯಾವುದೇ ರೀತಿಯಲ್ಲಿ ಪೋಲಾಗದಂತೆ ಸಂಗ್ರಹಿಸಿ, ರೈತರ ಎರಡು ಬೆಳೆಗಳಿಗೆ ನೀರು ಕೊಡುವುದು ಅಧಿಕಾರಿಗಳ ಹೊಣೆಯಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಇಲ್ಲಿಗೆ ಸಮೀಪದ ಬಾಡ ಗ್ರಾಮದ ಮರಳಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಬಾರಿ ಭೀಕರ ಬರಗಾಲದಿಂದ ರೈತರು ಭತ್ತ ಬೆಳೆಯಲು ಆಗಲಿಲ್ಲ. ಈ ಬಾರಿ ಮುಂಗಾರು ಮಳೆ ಅಬ್ಬರದಿಂದ ಭದ್ರಾ ಜಲಾಶಯದಲ್ಲಿ 165 ಅಡಿ ನೀರು ಸಂಗ್ರಹವಾಗಿದ್ದು, ಇನ್ನು 20 ಅಡಿ ಬಾಕಿ ಇದೆ. ನೀರು ಸಂರಕ್ಷಿಸಿ ರೈತರ ಎರಡು ಬೆಳೆಗಳಿಗೆ ನೀರು ಕೊಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದರು.

ಭದ್ರಾ ಕಾಲುವೆಗಳಿಗೆ ಹೊಂದಿಕೊಂಡಿರುವ ಕೆರೆಗಳಿಗೆ ಮೊದಲು ನೀರು ತುಂಬಿಸಿಕೊಂಡು ನಂತರ ಭತ್ತ ನಾಟಿ ಮಾಡಲು ಅವಕಾಶ ನೀಡಬೇಕು. ಭದ್ರಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿರುವ ಕಾಲುವೆ ಅಭಿವೃದ್ಧಿ ಕಾಮಗಾರಿಗಳಿಗೆ ಪುನಃ ಚಾಲನೆ ನೀಡಬೇಕು. ಕಾಲುವೆ ದುರಸ್ತಿ ಮಾಡಿ ಹಂತ ಹಂತವಾಗಿ ನೀರು ಬಿಡಲು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸುವುದಾಗಿ ತಿಳಿಸಿದರು. ತುಂಗಾ ಜಲಾಶಯದಿಂದ ಭದ್ರಾ ಜಲಾಶಯಕ್ಕೆ (2ನೇ ಪುಟಕ್ಕೆ)

### 40 ಕೋಟಿ ರೂ. ಬಿಡುಗಡೆಗೆ ಶೀಘ್ರವೇ ಅನುಮೋದನೆ

ನನ್ನ ಮತ ಕ್ಷೇತ್ರದ ವ್ಯಾಪ್ತಿಯು ಅತಿ ಹೆಚ್ಚು ನೀರಾವರಿ ಪ್ರದೇಶ ಹೊಂದಿದ್ದು, ಭದ್ರಾ ಕಾಲುವೆಗಳನ್ನು ವೀಕ್ಷಿಸಿ ಇಲ್ಲಿನ ನೀರಿನ ಸಮಸ್ಯೆ, ಕಾಲುವೆಗಳ ಸಮಸ್ಯೆ, ಗೇಟ್‌ಗಳ ಸಮಸ್ಯೆ ಹಾಗೂ ಸೇತುವೆಗಳ ಸಮಸ್ಯೆಗಳ ಬಗ್ಗೆ ಕಳೆದ ಅಧಿವೇಶನದಲ್ಲಿ ಬೆಳಕು ಚೆಲ್ಲಿದ್ದೆ. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 40 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು, ಈಗ ನೀರಾವರಿ ಇಲಾಖೆಯಲ್ಲಿ ಅನುದಾನ ಬಿಡುಗಡೆಗೆ ಪ್ರಕ್ರಿಯೆ ಹಂತದಲ್ಲಿದ್ದು, ಅಲ್ಲಿಂದ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, ಶೀಘ್ರವೇ 40 ಕೋಟಿ ರೂ. ಅನುದಾನ ಬಿಡುಗಡೆ ಆಗಲಿದೆ ಎಂದು ಶಾಸಕ ಕೆ.ಎಸ್.ಬಸವಂತಪ್ಪ ತಿಳಿಸಿದರು.

### ಕನ್ನಡಿಗರಲ್ಲಿ ಕ್ಷಮೆ ಯಾಚಿಸಿದ ಫೋನ್‌ಪೇ ಸಿಇಒ

ನವದೆಹಲಿ, ಜು. 21 - ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ವಿಧೇಯಕಕ್ಕೆ ಸಂಬಂಧಿಸಿದಂತೆ ತಾವು ನೀಡಿದ ಹೇಳಿಕೆಗಾಗಿ ಫೋನ್ ಪೇ ಸಿಇಓ ಸ್ಥಾಪಕ ಸಮೀರ್ ನಿಗಮ್ ಬೇಷರತ್ ಕ್ಷಮೆಯಾಚಿಸಿದ್ದಾರೆ.

ನಾನೆಂದು ರಾಜ್ಯ ಹಾಗೂ ಜನತೆಯನ್ನು (4ನೇ ಪುಟಕ್ಕೆ)

### ವಿಶೇಷ ಸ್ಥಾನಮಾನಕ್ಕಾಗಿ ಕೇಂದ್ರಕ್ಕೆ ರಾಜ್ಯಗಳ ಒತ್ತಾಯ

ನವದೆಹಲಿ, ಜು. 21 – ಬಿಹಾರ, ಆಂಧ್ರಪ್ರದೇಶ ಹಾಗೂ ಒಡಿಶಾಗಳಿಗೆ ವಿಶೇಷ ಸ್ಥಾನಮಾನ ನೀಡುವಂತೆ ಪಕ್ಷಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ. ಸಂಸತ್ ಅಧಿವೇಶನದ ಮುನ್ನ ಕರೆಯಲಾಗಿದ್ದ ಸಭೆಯಲ್ಲಿ ಜೆಡಿಯು, ವೈಎಸ್‌ಆರ್‌ಸಿಪಿ ಹಾಗೂ ಬಿಜೆಡಿ ಪಕ್ಷಗಳು ಈ ಬೇಡಿಕೆ ಮುಂದಿಟ್ಟಿವೆ. ವಿಶೇಷ ಸ್ಥಾನಮಾನ ಸಾಧ್ಯವಾಗದೇ ಇದ್ದಲ್ಲಿ ವಿಶೇಷ ಹಣಕಾಸು ಪ್ಯಾಕೇಜ್ ನೀಡಬೇಕು ಎಂದು ಜೆಡಿಯು ನಾಯಕ ಸಂಜಯ್ ಕುಮಾರ್ ಝಾ ಒತ್ತಾಯಿಸಿದ್ದಾರೆ.


REAL ESTATE INVESTMENT OPPORTUNITY FOR INVESTING
CONTACT
91642 56425
97436 54365



### ಗುಜರಾತ್ ; 13 ಚಂಡೀಪುರ ವೈರಸ್ ಪ್ರಕರಣಗಳು ಪತ್ತೆ : ಐವರ ಸಾವು

ಅಹಮದಾಬಾದ್, ಜು. 21 - ಗುಜರಾತ್‌ನಲ್ಲಿ ಗುರುವಾರ 13 ಶಂಕಿತ ಚಂಡಿಪುರ ವೈರಸ್ ಪ್ರಕರಣಗಳು ಪತ್ತೆಯಾಗಿವೆ ಹಾಗೂ ಐವರು ಸಾವನ್ನಪ್ಪಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಇದುವರೆಗೂ ಚಂಡಿಪುರ ವೈರಸ್‌ನ ಶಂಕಿತ ಹಾಗೂ ದೃಢಪಟ್ಟ 84 ಪ್ರಕರಣಗಳು ಪತ್ತೆಯಾಗಿವೆ. ಹಾಗೂ 32 ಜನರು ಸಾವನ್ನಪ್ಪಿದ್ದಾರೆ. ಚಂಡೀಪುರ ವೈರಸ್ ಕಾರಣದಿಂದ ಜ್ವರ ಹಾಗೂ ಫ್ಲೂ ರೀತಿಯ ಲಕ್ಷಣಗಳು ಕಂಡುಬರುತ್ತವೆ. ಮೆದುಳಿನಲ್ಲಿ (4ನೇ ಪುಟಕ್ಕೆ)

### ಮರು ಆಯ್ಕೆ ಬೇಡವೆಂದ ಬಿಡೆನ್

#### ಸ್ಪರ್ಧೆಯಿಂದ ಹಿಂದಕ್ಕೆ ಸರಿದ ಅಮೆರಿಕದ ಅಧ್ಯಕ್ಷ



ವಾಷಿಂಗ್ಟನ್, ಜು. 21 - ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು ತಮ್ಮ ಮರು ಆಯ್ಕೆಯ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಪಕ್ಷ ಹಾಗೂ ದೇಶದ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರು ಹೇಳಿದ್ದಾರೆ.

ನವಂಬರ್ 5 ರಂದು ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಚುನಾವಣೆಗೆ 4 ತಿಂಗಳು ಇರುವಂತೆಯೇ 81 ವರ್ಷದ ಬಿಡೆನ್ ಅವರು ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. (4ನೇ ಪುಟಕ್ಕೆ)


ಸಿ.ಬಿ. ಹನುಮಂತಪ್ಪ (ಹೊಸ ಕಡ್ಲೇಬಾಳು) ನಿಧನ



ಜನನ : 21.07.1978
ಮರಣ : 21.07.2024

ದಾವಣಗೆರೆ ತಾಲ್ಲೂಕು ಹೊಸ ಕಡ್ಲೇಬಾಳು ವಾಸಿ
ದಿ. ಚಳಗೇರಿ ಬಸಪ್ಪ ಮತ್ತು ದಿ. ಅನಸೂಯಮ್ಮನವರ ಪುತ್ರ
ಶ್ರೀ ಸಿ.ಬಿ. ಹನುಮಂತಪ್ಪ
ಇವರು ದಿನಾಂಕ : 21.7.2024ರ ಭಾನುವಾರ ರಾತ್ರಿ 9.20ಕ್ಕೆ ನಿಧನರಾದರು. ಮೃತರಿಗೆ 46 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ, ನಾಲ್ವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 22.7.2024ರ ಸೋಮವಾರ ಮಧ್ಯಾಹ್ನ 12ಕ್ಕೆ ಕಡ್ಲೇಬಾಳು ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಧರ್ಮಪತ್ನಿ, ನಾಲ್ವರು ಪುತ್ರರು, ಸಹೋದರಿಯರು, ಭಾವಂದಿರು ಹಾಗೂ ಅಪಾರ ಬಂಧು-ಬಳಗ ಮತ್ತು ಊರಿನ ಗ್ರಾಮಸ್ಥರು.



ಏಳನೇ ವರ್ಷದ ಪುಣ್ಯಸ್ಮರಣೆ



ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆ ಹಾಗೂ
ನಗರದ ದವನ್ ಕಾಲೇಜ್‌ನ ಗೌರವಾಧ್ಯಕ್ಷರೂ ಮತ್ತು ಕುಮಾರಪಟ್ಟಣಂ
ಗ್ರಾಸಿಂ ಇಂಡಸ್ಟ್ರೀಸ್‌ನ ನಿವೃತ್ತ ಸಹಾಯಕ ಮಹಾಪ್ರಬಂಧಕರೂ ಆಗಿದ್ದ
ಲಿಂ|| ಕಕ್ಕರಗೊಳ್ಳ ಗೌಡ್ರು ಪರಮೇಶ್ವರಪ್ಪ
ಜನನ : 21-08-1943 ಲಿಂಗೈಕ್ಯ : 22-07-2017
ಇವರು ಶಿವೈಕ್ಯರಾಗಿ ಇಂದಿಗೆ ಏಳು ವರ್ಷಗಳಾದವು.
ಸದಾ ನಿಮ್ಮ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಗಿರಿಜಮ್ಮ ಪರಮೇಶ್ವರಪ್ಪ, ದಾವಣಗೆರೆ.
ಪುತ್ರಿ : ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದರು, ದಾವಣಗೆರೆ. ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಸಚಿವರು, ಕರ್ನಾಟಕ ಸರ್ಕಾರ
ಚಿ|| ಸಮರ್ಥ, ಕು|| ಶ್ರೇಷ್ಠ, ಮಾ|| ಶಿವ
ಪುತ್ರ : ಶ್ರೀ ಜಿ.ಪಿ. ಪ್ರಕಾಶ್, ಮ್ಯಾನೇಜರ್, ಗ್ರಾಸಿಂ ಇಂಡಸ್ಟ್ರೀಸ್, ಕುಮಾರಪಟ್ಟಣಂ, ಶ್ರೀಮತಿ ಸುಮ ಪ್ರಕಾಶ್ ಹಾಗೂ ಚಿ|| ವಿರಾಜಿತ್
ಸಹೋದರರಾದ : ✦ ಶ್ರೀ ಕೆ. ಜಿ. ಬಸವನಗೌಡ್ರು, ಶ್ರೀಮತಿ ದ್ರಾಕ್ಷಾಯಣಮ್ಮ, ಕಕ್ಕರಗೊಳ್ಳ.
✦ ಶ್ರೀಮತಿ ಕುಸುಮ, ದಿ|| ಕೆ.ಜಿ. ಲೋಕೇಶ್ವರಪ್ಪ, ದಾವಣಗೆರೆ. ✦ ಶ್ರೀ ಕೆ. ಜಿ. ವೀರಬಸಪ್ಪ, ಶ್ರೀಮತಿ ಮಹಾಲಕ್ಷ್ಮಿ, ದಾವಣಗೆರೆ.
ಮತ್ತು ಸಹೋದರಿಯರು ಹಾಗೂ ಮಕ್ಕಳು, ಗೌಡ್ರು ಮನೆತನದವರು ಹಾಗೂ ಬಂಧು-ಮಿತ್ರರು, ಕಕ್ಕರಗೊಳ್ಳ.

ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು
ಪಟೇಲ್ ವೀರಪ್ಪ ಟ್ರಸ್ಟ್ (ರಿ.)
ಪಟೇಲ್ ವೀರಪ್ಪ ಸ್ಕೂಲ್, ಕಕ್ಕರಗೊಳ್ಳ
PVS PATEL VEERAPPA SCHOOL
Spurthi Educational Trust (R) DAVAN
ಸ್ಪೂರ್ತಿ ಎಜುಕೇಷನ್ ಟ್ರಸ್ಟ್ (ರಿ.)
ದವನ್ ಕಾಲೇಜ್, ದಾವಣಗೆರೆ
Spurthi

# ಸಾಯಿಬಾಬಾ ದೇವಸ್ಥಾನ ಬರದ ನಾಡಿನ ಕಲ್ಯಾಣ ಮಂದಿರವಾಗಲಿ

## ಸೊಕ್ಕೆ ಗ್ರಾಮದಲ್ಲಿ ಅನ್ನ ದಾಸೋಹ ಗೃಹ ನಿರ್ಮಾಣದ ಶಂಕುಸ್ಥಾಪನೆಯಲ್ಲಿ ನೊಣವಿನಕೆರೆ ಶ್ರೀ ಆಶೀರ್ವಚನ



ಜಗಳೂರು, ಜು. 21 - ಸಮಾಜ ಸೇವಕ ಸೊಕ್ಕೆ ತಿಪ್ಪೇಸ್ವಾಮಿ ಅವರು, ಸ್ವಗ್ರಾಮದಲ್ಲಿ ಪ್ರತಿಷ್ಠಾಪಿಸಿದ ಶ್ರೀ ಶಿರಡಿ ಸತ್ಯ ಸಾಯಿಬಾಬಾ ದೇವಸ್ಥಾನ ಬರದ ನಾಡಿನ ಬಡವರ ಕಲ್ಯಾಣ ಮಂದಿರವಾಗಲಿ ಎಂದು ತಿಪಟೂರು ತಾಲ್ಲೂಕಿನ ನೊಣವಿನಕೆರೆ ಶ್ರೀ ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಸೊಕ್ಕೆ ಗ್ರಾಮದ ಶ್ರೀ ಸಾಯಿ ಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆ ಅಂಗವಾಗಿ ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಧಾರ್ಮಿಕ ಸಭೆ ಹಾಗೂ ಅನ್ನ ದಾಸೋಹ ಗೃಹ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ನಂತರ ದಿವ್ಯಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಕಳೆದ ವರ್ಷದಲ್ಲಿ ಗಡಿ ಗ್ರಾಮದಲ್ಲಿ ಶ್ರೀ ಸಾಯಿಬಾಬಾ ಮೂರ್ತಿ ಪ್ರತಿಷ್ಠಾಪನೆಗೊಂಡ ನಂತರ ದೇವರ ಅನುಗ್ರಹದಿಂದ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗುತ್ತಿದೆ. ಈ ಭಾಗದ ಜನತೆಗಾಗಿ ಬಡವರ ಕಲ್ಯಾಣ ಕಾರ್ಯಗಳು ಜರುಗಲಿ, ಸಾಯಿಬಾಬಾ ಟ್ರಸ್ಟ್‌ನ ಟ್ರಸ್ಟಿಗಳು ನೆರೆಹೊರೆಯ ಭಾಗದ ಬಡಜನರ ಅನುಕೂಲಕ್ಕಾಗಿ ವಿದ್ಯೆ, ಅನ್ನ ದಾಸೋಹಕ್ಕೆ ಕೇಂದ್ರವಾಗಲಿ, ತಿಪ್ಪೇಸ್ವಾಮಿ ಅವರ ಧಾರ್ಮಿಕ, ಸಾಮಾಜಿಕ ಸೇವೆಗೆ ಸರ್ವಭಕ್ತ ಸಮೂಹ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ನೊಣವಿನಕೆರೆ ಶ್ರೀಗಳು ರಾಜ್ಯದ ಹಲವು ಭಕ್ತಸಮೂಹಕ್ಕೆ ಆರಾಧ್ಯ ದೈವವಾಗಿದ್ದಾರೆ. ಅವರ ಪಾದಾರ್ಪಣೆ ಮತ್ತು ಆಶೀರ್ವಾದದಿಂದ ನನ್ನ ಆಡಳಿತ ಕ್ಷೇತ್ರ ಸರ್ವತೋಮುಖ ಅಭಿವೃದ್ಧಿಗೊಳ್ಳಲಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಹತ್ತರ ಕನಸಿನ ಯೋಜನೆ ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ 57 ಕೆರೆ ತುಂಬಿಸುವ ಯೋಜನೆಯಡಿ ಈಗಾಗಲೇ 30 ಕೆರೆಗಳಿಗೆ ನೀರು ಹರಿಯುತ್ತಿದೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಬಡ ರೈತರ ನೀರಾವರಿ ಕನಸು ನನಸಾಗಲಿದೆ ಎಂದರು.

ಈ ಸಂದರ್ಭದಲ್ಲಿ ಸಾಯಿಬಾಬಾ ಮಂದಿರದ ನಿರ್ಮಾತೃ ತಿಪ್ಪೇಸ್ವಾಮಿ, ಗ್ರಾ.ಪಂ ಮಾಜಿ ಅಧ್ಯಕ್ಷರೂ ಆದ ದಿಶಾ ಸಮಿತಿ ಸದಸ್ಯೆ ಸ್ವಾತಿ ತಿಪ್ಪೇಸ್ವಾಮಿ, ಜಯಲಕ್ಷ್ಮಿ ತಿಪ್ಪೇಸ್ವಾಮಿ, ಗ್ರಾ.ಪಂ ಅಧ್ಯಕ್ಷ ತಿರುಮಲೇಶ್, ಜಿ.ಪಂ. ಮಾಜಿ ಸದಸ್ಯ ಸೊಕ್ಕೆ ನಾಗರಾಜ್, ಎ.ಎಂ. ಮರುಳಾರಾಧ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಇಳಿಮುಖ



ಉಕ್ಕಡಗಾತ್ರಿ - ಫತ್ತೇಪುರ ರಸ್ತೆ ಸಂಚಾರಕ್ಕೆ ಮುಕ್ತ

ಮಲೇಬೆನ್ನೂರು, ಜು.21- ಮಲೆನಾಡಿನಲ್ಲಿ ಕಳೆದ ಒಂದು ವಾರ ಸತತವಾಗಿ ಸುರಿದ ಮುಂಗಾರು ಮಳೆ ಶನಿವಾರದಿಂದ ಕಡಿಮೆ ಆಗಿದ್ದು, ತುಂಗಾ ಮತ್ತು ಭದ್ರಾ ನದಿಗಳಲ್ಲಿ ನೀರಿನ ಹರಿವು ಭಾನುವಾರ ಗಣನೀಯವಾಗಿ ಇಳಿಕೆಯಾಗಿದೆ.

ಗಾಜನೂರಿನ ತುಂಗಾ ಜಲಾಶಯಕ್ಕೆ ಭಾನುವಾರ ಬೆಳಗ್ಗೆ 35 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸಂಜೆ 30 ಸಾವಿರ ಕ್ಯೂಸೆಕ್ಸ್‌ಗೆ ಇಳಿಕೆ ಕಂಡಿದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಬಹಳಷ್ಟು ಕಡಿಮೆ ಆಗಿದ್ದು, ಉಕ್ಕಡಗಾತ್ರಿಯಲ್ಲಿ ತುಂಗಭದ್ರಾ ನದಿ ನೀರಿನಲ್ಲಿ ಜಲಾವೃತವಾಗಿದ್ದ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದಲ್ಲಿ ಸ್ನಾನ ಘಟ್ಟ ಮತ್ತು ಹಣ್ಣು, ಕಾಯಿ ಅಂಗಡಿಗಳು ಕಾಣಿಸತೊಡಗಿವೆ. ಅಲ್ಲದೇ ಉಕ್ಕಡಗಾತ್ರಿ - ಫತ್ತೇಪುರ ರಸ್ತೆ ಸಂಪರ್ಕ ಸಂಚಾರಕ್ಕೆ ಮುಕ್ತ ಗೊಂಡಿದ್ದು, ಈಗಾಗಲೇ ವಾಹನಗಳ ಸಂಚಾರ ಆರಂಭಗೊಂಡಿವೆ ಎಂದು ದೇವಸ್ಥಾನದ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

**ಭದ್ರಾ ಒಳ ಹರಿವು ದಿಢೀರ್ ಇಳಿಕೆ :** ಭದ್ರಾ ಜಲಾಶಯಕ್ಕೆ ಶನಿವಾರ 46 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಭಾನುವಾರ 23 ಸಾವಿರ ಕ್ಯೂಸೆಕ್ಸ್‌ಗೆ ದಿಢೀರ್ ಇಳಿಕೆ ಆಗಿದೆ. ಭಾನುವಾರ ಸಂಜೆ ಜಲಾಶಯದ ನೀರಿನ ಮಟ್ಟ 166 ಅಡಿ ದಾಟಿದ್ದು, ಕಳೆದ ವರ್ಷಕ್ಕಿಂತ 23 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 143 ಅಡಿ ನೀರಿತ್ತು. ಜಲಾಶಯದ ಗರಿಷ್ಠ ಮಟ್ಟ 186 ಅಡಿಗಳಾಗಿದ್ದು, ಜಲಾಶಯ ಭರ್ತಿಗೆ 20 ಅಡಿ ಮಾತ್ರ ಬಾಕಿ ಇದೆ.

**ಸಸಿ ಮಡಿಗೆ ಸಿದ್ಧತೆ :** ಭದ್ರಾ ಜಲಾಶಯದಲ್ಲಿ 165 ಅಡಿ ನೀರು ಸಂಗ್ರಹವಾಗಿರುವುದರಿಂದ ಅಚ್ಚುಕಟ್ಟಿನ ರೈತರು ಮುಂಗಾರು ಹಂಗಾಮಿನ ಭತ್ತದ ಬೆಳೆಗಾಗಿ ನಾಟಿ ಮಾಡಲು, ಸಸಿ ಮಡಿ ಚೆಲ್ಲಲು ಸಿದ್ಧತೆ ನಡೆಸಿದ್ದಾರೆ. ಸ್ವಂತ ನೀರಿನ ಸೌಲಭ್ಯ ಇರುವವರು ಈಗಾಗಲೇ ಸಸಿ ಮಡಿ ಚೆಲ್ಲಿದ್ದಾರೆ.

# ಕಾರ್ಯಾಚರಣೆ ವಿಳಂಬವಾಗಿಲ್ಲ



### ಶಿರೂರು ಗುಡ್ಡ ಕುಸಿತ ಪರಿಶೀಲಿಸಿದ ಸಿಎಂ

ಅಂಕೋಲಾ, ಜು. 21 - ಶಿರೂರು ಬಳಿ ಗುಡ್ಡ ಕುಸಿದಿರುವ ಹೆದ್ದಾರಿಗೆ ಭೇಟಿ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದ್ದಾರೆ. ಕಳೆದ ವಾರ ಹೆದ್ದಾರಿ ಮೇಲೆ ಗುಡ್ಡ ಕುಸಿದು ಅನಾಹುತ ಸಂಭವಿಸಿತ್ತು.

ಸರ್ಕಾರ ನೆರವು ಕಾರ್ಯಾಚರಣೆ ಕೈಗೊಳ್ಳುವಲ್ಲಿ ಯಾವುದೇ ವಿಳಂಬವಾಗಿಲ್ಲ. ಸೈನ್ಯದ ಸಿಬ್ಬಂದಿ ಸಹ ಈ ಪ್ರಯತ್ನದಲ್ಲಿ ಕೈಜೋಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಗುಡ್ಡ ಕುಸಿತದಲ್ಲಿ 10 ಜನ ಕಣ್ಮರೆಯಾಗಿದ್ದರು, 7 ಮೃತ ದೇಹಗಳನ್ನು ಪತ್ತೆ ಮಾಡಲಾಗಿದೆ. ಇನ್ನು ಮೂವರು ಕಾಣೆಯಾಗಿದ್ದು ನೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಮುಖ್ಯಮಂತ್ರಿ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಜಿಲ್ಲೆಯ ಶಾಸಕರು, ಅಧಿಕಾರಿಗಳು ಉಪಸ್ಥಿತರಿದ್ದರು.

# ಉಚಿತ ಇಂಟರ್‌ನೆಟ್ ಹಕ್ಕು ಖಾಸಗಿ ಮಸೂದೆಗೆ ಅನುಮತಿ

ನವದೆಹಲಿ, ಜು. 21 - ದೇಶದ ಪ್ರತಿಯೊಬ್ಬ ನಾಗರಿಕನಿಗೂ ಉಚಿತ ಇಂಟರ್‌ನೆಟ್ ಸೇವೆಯ ಹಕ್ಕು ನೀಡಬೇಕೆಂಬ ಖಾಸಗಿ ಸದಸ್ಯರ ಮಸೂದೆಗೆ ಸರ್ಕಾರ ಅನುಮತಿ ನೀಡಿದೆ. ಯಾವುದೇ ನಾಗರಿಕ ಶುಲ್ಕ ಅಥವಾ ವೆಚ್ಚವಿಲ್ಲದೆ ಇಂಟರ್‌ನೆಟ್ ಸೇವೆ ಪಡೆಯಲು ಅವಕಾಶ ನೀಡಬೇಕು ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಸಿಪಿಐ (ಎಂ) ರಾಜ್ಯಸಭಾ ಸದಸ್ಯ ವಿ. ಶಿವದಾಸನ್ ಅವರು 2023ರಲ್ಲಿ ಈ ಮಸೂದೆ ಪರಿಚಯಿಸಿದ್ದರು. ಈ ಮಸೂದೆಯನ್ನು ಸದನದಲ್ಲಿ ಮಂಡಿಸಲು ಪರಿಶೀಲಿಸಬೇಕೆಂದು ಟೆಲಿಕಾಂ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಅವರು ರಾಜ್ಯಸಭಾ ಪ್ರಧಾನ ಕಾರ್ಯದರ್ಶಿಗೆ ತಿಳಿಸಿದ್ದರು.

ಸರ್ಕಾರಿ ಬೊಕ್ಕಸಕ್ಕೆ ವೆಚ್ಚ ತರುವ ಖಾಸಗಿ ಮಸೂದೆಗಳನ್ನು ಮಂಡಿಸಲು ರಾಷ್ಟ್ರಪತಿ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಸಂಬಂಧಿಸಿದ ಸಚಿವಾಲಯಗಳೂ ಸಹ ಮಸೂದೆಗೆ ಅನುಮತಿ ನೀಡಬೇಕಾಗುತ್ತದೆ.

ಸಂವಿಧಾನದಲ್ಲಿ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿಸ್ತರಿಸುವ ಮೂಲಕ ಎಲ್ಲರಿಗೂ ಉಚಿತ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಬೇಕು ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಮೂಲಕ ಸಮಾಜದಲ್ಲಿರುವ ಡಿಜಿಟಲ್ ವಿಭಜನೆಯನ್ನು ನಿವಾರಿಸಬೇಕು ಎಂಬುದು ಮಸೂದೆಯ ಉದ್ದೇಶವಾಗಿದೆ.

ಕೇಂದ್ರ ಸರ್ಕಾರ ಎಲ್ಲಾ ನಾಗರಿಕರಿಗೆ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಬೇಕು ಇಲ್ಲವೇ ಸಬ್ಸಿಡಿ ಮೂಲಕ ಇಂಟರ್‌ನೆಟ್ ಸೌಲಭ್ಯ ನೀಡಬೇಕು ಎಂದೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

# ಭದ್ರಾ ದುರಸ್ತಿ : 24ರಂದು ಹೆದ್ದಾರಿ ಬಂದ್

**(1ನೇ ಪುಟದಿಂದ)** ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಹೆದ್ದಾರಿ ಬಂದ್ ಮಾಡುವುದು ಸೂಕ್ತ ಎಂದರು.

ರೈತ ಮುಖಂಡ ತೇಜಸ್ವಿ ಪಟೇಲ್ ಮಾತನಾಡಿ, ಆಗಸ್ಟ್ 1ಕ್ಕೆ ನಿರಾವರಿ ಸಲಹಾ ಸಮಿತಿ ಸಭೆ ಕರೆದು ಅಲ್ಲಿ ಶಾಸಕರಿಗಿಂತ ಹೆಚ್ಚು ಅನುಭವ ಹೊಂದಿದ ರೈತ ಪ್ರತಿನಿಧಿ ಹಾಗೂ ನೀರಾವರಿ ಇಂಜಿನಿಯರ್‌ಗಳ ಸಲಹೆಗೆ ಮಾನ್ಯತೆ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಮಾಜಿ ಸಚಿವ ಎಸ್.ಎ ರವೀಂದ್ರನಾಥ್, ಮಾಜಿ ಶಾಸಕ ಬಸವರಾಜ ನಾಯ್ಕ, ಮುಖಂಡರುಗಳಾದ ಮಾಡಾಳ್ ಮಲ್ಲಿಕಾರ್ಜುನ್, ಲೋಕಿಕೆರೆ ನಾಗರಾಜ್, ಚಂದ್ರಶೇಖರ್ ಪೂಜಾರ್, ರೈತ ಮುಖಂಡರಾದ ಬೆಳವನೂರು ನಾಗೇಶ್ವರರಾವ್, ಗೋಪನಾಳ್ ಕರಿಬಸಪ್ಪ, ಶಾಗಲೆ ಜಗದೀಶ್‌ಗೌಡ್ರು, ಗೋಣಿವಾಡ ಮಂಜುನಾಥ್, ಪಿ.ಎ.ನಾಗರಾಜಪ್ಪ, ವಡ್ನಾಳ್ ಸಿದ್ದೇಶ್, ಬಾತಿ ಶಿವಕುಮಾರ್, ಬಲ್ಲೂರು ಬಸವರಾಜು ಮತ್ತಿತರರಿದ್ದರು.

### ರೈತ ವಿರೋಧಿ ಸರ್ಕಾರ..!

ಜನ ವಿರೋಧಿ ಹಾಗೂ ರೈತ ವಿರೋಧಿ ಕಾಂಗ್ರೆಸ್ ಸರ್ಕಾರವು ಬರಗಾಲ ಮುಗಿದು ಮಳೆಗಾಲ ಬಂದರೂ ಬರ ಪರಿಹಾರದ ಹಣ ಬಿಡುಗಡೆಗೊಳಿಸಿಲ್ಲ ಎಂದು ಎಂ.ಪಿ ರೇಣುಕಾಚಾರ್ಯ ದೂರಿದರು.

ಕಳೆದ 15 ದಿನಗಳಿಂದ ಸುರಿದ ಮಳೆಗೆ ಮೆಕ್ಕೆಜೋಳ ಹಾಗೂ ಇತರೆ ಬೆಳೆಗಳು ಹಾನಿಯಾಗಿದ್ದು, ಶೀಘ್ರದಲ್ಲೇ ಹಾನಿಯಾದ ಬೆಳೆ ಸಮೀಕ್ಷೆ ಮಾಡಿ ಸರ್ಕಾರದಿಂದ ಪರಿಹಾರ ಸೂಚಿಸಬೇಕು.

ಈ ಹಿಂದೆ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವಿದ್ದಾಗ ಮನೆ ಡ್ಯಾಮೇಜ್ ಆದರೆ 3 ಲಕ್ಷ, ಮನೆ ದುರಸ್ತಿಗೆ 50 ಸಾವಿರ ಹಾಗೂ ಮನೆಗೆ ನೀರು ನುಗ್ಗಿದರೆ 10 ಸಾವಿರ ಕೊಡುತ್ತಿದ್ದೆವು. ಆದರೆ ಜನರ ಬಗ್ಗೆ ಕಾಳಜಿ ಇಲ್ಲದ ಕಾಂಗ್ರೆಸ್ ಸರ್ಕಾರ ಕೇವಲ 6-5 ಸಾವಿರ ಬಿಡುಗಡೆ ಮಾಡುತ್ತಿರುವುದು ಸರಿಯಲ್ಲ ಎಂದಿದ್ದಾರೆ.

# ಅಧಿವೇಶನಕ್ಕೆ ಆರು ಖಾಸಗಿ ಮಸೂದೆ

ನವದೆಹಲಿ, ಜು. 21 - ಮುಂಬರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಆರು ಖಾಸಗಿ ಮಸೂದೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದರಲ್ಲಿ ನ್ಯಾಯಮೂರ್ತಿಗಳು ನಿವೃತ್ತರಾದ ನಂತರ ಪಕ್ಷಗಳಿಗೆ ಸೇರುವುದನ್ನು ತಡೆಯಬೇಕೆಂಬ ಮಸೂದೆಯೂ ಸೇರಿದೆ.

ಕೃತಕ ಬುದ್ಧಿವಂತಿಕೆ ಹಾಗೂ ಡೀಪ್‌ಫೇಕ್‌ಗೆ ಸಂಬಂಧಿಸಿದ ಮಸೂದೆ ಮತ್ತು ಪೌರತ್ವ ಕಾಯ್ದೆಗೆ ಸಂಬಂಧಿಸಿದ ಮಸೂದೆಗಳನ್ನೂ ದಾಖಲಿಸಿಕೊಳ್ಳಲಾಗಿದೆ.

ನ್ಯಾಯಮೂರ್ತಿ ಹಾಗೂ ಚುನಾವಣಾ ಆಯುಕ್ತರಂತಹ ಸಂವಿಧಾನಿಕ ಹುದ್ದೆಗಳಲ್ಲಿರುವವರು ನಿವೃತ್ತರಾದ ನಂತರ ರಾಜಕೀಯ ಪಕ್ಷಗಳಿಗೆ ಸೇರುವುದನ್ನು ನಿಷೇಧಿಸಬೇಕು ಎಂದು ಆರ್‌ಜೆಡಿ ಸಂಸದ ಎ.ಡಿ. ಸಿಂಗ್ ಅವರು ಖಾಸಗಿ ಮಸೂದೆ ರೂಪಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆಯಲ್ಲಿ ವೈವಾಹಿಕ ಅತ್ಯಾಚಾರವನ್ನು ಅಪರಾಧ ಎಂದು ಪರಿಗಣಿಸುವ ಅಂಶ ಸೇರಿಸಬೇಕೆಂದು ಮತ್ತೊಂದು ಮಸೂದೆಯನ್ನು ಸಿಂಗ್ ದಾಖಲಿಸಿದ್ದಾರೆ. ಉದ್ಯೋಗಿಗಳನ್ನು ಕೃತಕ ಬುದ್ಧಿವಂತಿಕೆಯಿಂದ ರಕ್ಷಿಸುವ ಮತ್ತು ಡೀಪ್‌ಫೇಕ್ ಅಪರಾಧಗೊಳಿಸುವ ಮಸೂದೆಗಳನ್ನು ತೃಣಮೂಲ ಕಾಂಗ್ರೆಸ್ ಸಂಸದೆ ಮೌಸಮ್ ನೂರ್ ದಾಖಲಿಸಿದ್ದಾರೆ.

ನೆರೆ ದೇಶಗಳಲ್ಲಿ ಪೀಡನೆಗೆ ಸಿಲುಕಿರುವ ಧಾರ್ಮಿಕ ಅಲ್ಪಸಂಖ್ಯಾತರಿಗೆ ಭಾರತದಲ್ಲಿ ಪೌರತ್ವ ನೀಡುವ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಸಿಪಿಐ ಪಕ್ಷದ ಸಂತೋಷ್ ಕುಮಾರ್ ಅವರು ಖಾಸಗಿ ಮಸೂದೆ ದಾಖಲಿಸಿದ್ದಾರೆ.

# ಕುಂಬಳೂರಿನ ಚಿಟ್ಟಕ್ಕಿ ಶಾಲೆಯಲ್ಲಿ ಸಂಭ್ರಮದ ಗುರು ಪೂರ್ಣಿಮೆ

ಹರಿಹರ ತಾಲ್ಲೂಕಿನ ಕುಂಬಳೂರು ಗ್ರಾಮದ ಚಿಟ್ಟಕ್ಕಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಇಂದು ಬೆಳಗ್ಗೆ 11ಕ್ಕೆ ಗುರು ಪೂರ್ಣಿಮೆ ಕಾರ್ಯಕ್ರಮ ನಡೆಯಲಿದೆ. ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶಾರದೇಶಾನಂದಾಜೀ ಮಹರಾಜ್ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಆಡಳಿತಾಧಿಕಾರಿ ಎಸ್.ಕೆ. ಕುಮಾರ್, ಪ್ರಾಚಾರ್ಯ ಚೇತನ್ ಕುಮಾರ್, ಉಪ ಪ್ರಾಚಾರ್ಯೆ ಅಖಿಲೇಶ್ವರಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ಶುಲ್ಕ ಹೆಚ್ಚಳದ ಸರ್ಕಾರದ ನಿಲುವು ಎಐಡಿಎಸ್‌ಓ ಖಂಡನೆ

ದಾವಣಗೆರೆ, ಜು.21- ರಾಜ್ಯ ಕಾಂಗ್ರೆಸ್ ಸರ್ಕಾರವು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಶುಲ್ಕದಲ್ಲಿ 1400 ರೂ.ಗಳ ಹೆಚ್ಚಳ ಗೊಳಿಸಿರುವುದನ್ನು ಎಐಡಿಎಸ್‌ಓ ಉಗ್ರವಾಗಿ ಖಂಡಿಸಿದೆ.

ಪ್ರತಿಷ್ಠಿತ ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ (ಯುವಿಸಿಇ) ಇಲ್ಲಿ 2000 ರೂ.ಗಳಷ್ಟು ಹೆಚ್ಚಿಸಿದ್ದು, ಸರ್ಕಾರದ ಈ ನಿಲುವಿನಿಂದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಶುಲ್ಕವು 42,000ರೂ.ಗಳಿಗೆ ಏರಿದೆ ಎಂದು ದೂರಿದ್ದಾರೆ.

ರಾಜ್ಯದ ಶಿಕ್ಷಣ ಪ್ರೇಮಿಗಳು ಸಂಘಟಿತರಾಗಿ ವೃತ್ತಿಪರ ಕೋರ್ಸ್‌ಗಳನ್ನು ಹಣ ಗಳಿಕೆಯ ಅಸ್ತ್ರವಾಗಿ ಬಳಸುವುದರ ವಿರುದ್ಧ ಧ್ವನಿ ಎತ್ತಬೇಕೆಂದು ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ಒತ್ತಾಯಿಸಿದ್ದಾರೆ.

ಬಡ ಜನರ ಹಾಗೂ ದಮನಿತರ ಪರ ಎಂದು ಕರೆಸಿಕೊಳ್ಳುವ ಸರ್ಕಾರವು ಈ ರೀತಿಯ ಶುಲ್ಕ ಏರಿಕೆ ಮಾಡುವುದಿಲ್ಲ. ಸಂಘಟನೆಯ ದೃಷ್ಟಿಯಲ್ಲಿ ಶುಲ್ಕದ ಹೆಚ್ಚಳ ಅಪರಾಧವಾಗಿದ್ದು, ಕೂಡಲೇ ಈ ಸರ್ಕಾರವು ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

## ಐಪಿ ಸೆಟ್ ಸ್ಥಾವರ ಸಂಖ್ಯೆಯೊಂದಿಗೆ ಆಧಾರ ಜೋಡಣೆಗೆ ಮನವಿ

**ಹರಿಹರ**

ಹರಿಹರ, ಜು. 21- ಬೆವಿಕಂ ಹರಿಹರ ಉಪವಿಭಾಗದ ವ್ಯಾಪ್ತಿಗೆ ಬರುವ ಐಪಿ ಪಂಪ್‌ಸೆಟ್ ಸ್ಥಾವರಗಳಿಗೆ ಆಧಾರ್ ಕಾರ್ಡ್ ಜೋಡಣೆ ಪ್ರಕ್ರಿಯೆ ಆರಂಭವಾಗಿದೆ.

ಐಪಿ ಸೆಟ್ ಹೊಂದಿರುವ ಗ್ರಾಹಕರು ಐಪಿ ಸೆಟ್ ಸ್ಥಾವರ ಸಂಖ್ಯೆಯೊಂದಿಗೆ ಆಧಾರ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ನಲ್ಲಿರುವ ದೂರವಾಣಿ ಸಂಖ್ಯೆಯ ಮೊಬೈಲ್, ಪಹಣಿ, ಹೆಸರು ಬದಲಾವಣೆ ಇದ್ದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಕೂಡಲೇ ಹತ್ತಿರದ ಬೆಸ್ಕಾಂ ಕಚೇರಿಗಳಿಗೆ ಭೇಟಿ ನೀಡಿ ಐಪಿ ಪಂಪ್‌ಸೆಟ್ ಸ್ಥಾವರಗಳಿಗೆ ಆಧಾರ್ ಕಾರ್ಡ್ ಜೋಡಣೆ ಮಾಡಿಕೊಳ್ಳಬೇಕೆಂದು ಬೆಸ್ಕಾಂ ಎಇಇ ಸಿ. ನಾಗರಾಜನಾಯ್ಕ ಕೋರಿದ್ದಾರೆ.

# 2 ಬೆಳೆಗೆ ನೀರು ಕೊಡುವುದು ಅಧಿಕಾರಿಗಳ ಹೊಣೆ



**(1ನೇ ಪುಟದಿಂದ)** ನೀರು ತುಂಬಿಸುವ ಯೋಜನೆಯ ಕಾಮಗಾರಿ ಸ್ಥಗಿತಗೊಂಡಿದ್ದು, ಕೂಡಲೇ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಪರಿಸರ ಇಲಾಖೆಯಿಂದ ಅಡ್ಡಿಯಾಗಿರುವ ತೊಡಕು ನಿವಾರಿಸಿ ಪುನಃ ಕಾಮಗಾರಿ ಆರಂಭಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಬೇಕು. ಈ ಯೋಜನೆ ಪೂರ್ಣಗೊಂಡರೆ ಮಳೆಗಾಲದಲ್ಲಿ ತುಂಗಾ ಜಲಾಶಯದಿಂದ ಸಾವಿರಾರು ಕ್ಯೂಸೆಕ್ಸ್ ನೀರು ಪೋಲಾಗುವುದನ್ನು ಭದ್ರಾ ಜಲಾಶಯಕ್ಕೆ ತುಂಬಿಸಿದರೆ ಅಪ್ಪರ್ ಭದ್ರಾ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ರೈತರಿಗೆ ಸಮರ್ಪಕ ನೀರು ಪೂರೈಸಬಹುದಾಗಿದೆ ಎಂದರು.

ಭದ್ರಾ ಇಂಜಿನಿಯರ್‌ಗಳು ವೈಜ್ಞಾನಿಕ ತಂತ್ರಜ್ಞಾನ ಬಳಸಿ ಭದ್ರಾ ಜಲಾಶಯದಲ್ಲಿ ಉಂಟಾಗಿರುವ ನೀರೆತ್ತುವ ಗೇಟ್‌ನ ಸಮಸ್ಯೆ ಬಗೆಹರಿಸಬೇಕು. ಜಲಾಶಯದಿಂದ ಯಾವುದೇ ಕಾರಣಕ್ಕೂ ನೀರು ಪೋಲಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಾಕೀತು ಮಾಡಿದರು.

ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಆರ್ಥಿಕವಾಗಿ ಬಲಪಡಿಸಿದಂತೆ ನೀರು ಬಳಕೆದಾರರ ಸಂಘಗಳನ್ನು ಆರ್ಥಿಕವಾಗಿ ಬಲಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲು ಒತ್ತಡ ಹಾಕುವುದಾಗಿ ಭರವಸೆ ನೀಡಿದ ಶಾಸಕರು, ನಾಳೆ ಅಧಿವೇಶನದಲ್ಲಿ ಪಾಲ್ಗೊಳ್ಳುವ ವೇಳೆ ನೀರಾವರಿ ಸಚಿವರು, ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚೆ ಮಾಡಿ ಕೂಡಲೇ ಸಲಹಾ ಸಮಿತಿ ಸಭೆ ಕರೆದು ನೀರು ಬಿಡುಗಡೆಗೆ ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡುವುದಾಗಿ ತಿಳಿಸಿದರು.

ಅತ್ತಿಗೆರೆ ನೀರು ಬಳಕೆದಾರರ ಸಂಘದ ಅಧ್ಯಕ್ಷ ಎ.ಓ. ರವಿಕುಮಾರ್, ಶರಣಪ್ಪ, ತಾ.ಪಂ. ಮಾಜಿ ಸದಸ್ಯ ಧರ್ಮಪ್ಪ, ಗ್ರಾ.ಪಂ. ಸದಸ್ಯ ರಂಗನಾಥ್, ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ್, ಸಿದ್ದೇಶ್ವರ ಕಬ್ಬೂರು, ದೇವೇಂದ್ರಪ್ಪ, ಬಾಡ ರುದ್ರಸ್ವಾಮಿ, ಮಳಲಕೆರೆ ಸುಭಾಷ್‌ಗೌಡ್ರು, ಮುರುಗೇಂದ್ರಪ್ಪ, ಕೃಷ್ಣಮೂರ್ತಿ, ಎಂ.ಡಿ. ಸುರೇಶಪ್ಪ, ಲೋಕಿಕೆರೆ ರವಿಕುಮಾರ್, ಗೋಪನಾಳ ನಿಂಗರಾಜ್, ಕಬ್ಬೂರ್ ಬಸವರಾಜಪ್ಪ, ಕಂದಗಲ್ ಕುಮಾರ, ಮಂಜುನಾಥ್, ಮಳಲ್ಕೆರೆ ವೆಂಕಟೇಶ್, ಹುಮ್ಮಜ್ಜ, ಅಣಬೇರು ಬುಡನ್ ಸಾಬ್ ಹಾಗೂ ಅಚ್ಚುಕಟ್ಟು ಪ್ರದೇಶದ ರೈತರು ಸಭೆಯಲ್ಲಿ ಭಾಗವಹಿಸಿದ್ದರು.

# ಕೇರಳ : ನಿಪಾ ಸೋಂಕಿಗೆ ಸಿಲುಕಿದ್ದ ಬಾಲಕನ ಸಾವು

ಕೋಳಿಕೋಡ್, ಜು. 21 - ನಿಪಾ ಸೋಂಕಿಗೆ ಸಿಲುಕಿ ಚಿಕಿತ್ಸೆ ಪಡೆಯುತ್ತಿದ್ದ ಕೇರಳದ 14 ವರ್ಷದ ಬಾಲಕ ಮೃತಪಟ್ಟಿರುವುದಾಗಿ ರಾಜ್ಯದ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಸೋಂಕಿಗೆ ಸಿಲುಕಿದ್ದ ಪಂಡಿಕ್ಕಾಡ್‌ನ ಬಾಲಕನಿಗೆ ಭಾನುವಾರ ಬೆಳಗ್ಗೆ ತೀವ್ರ ಹೃದಯಘಾತವಾಗಿದೆ. ಜೀವ ರಕ್ಷಣೆಗೆ ವೈದ್ಯರು ನಡೆಸಿದ ಪ್ರಯತ್ನ ಫಲ ನೀಡಿಲ್ಲ ಎಂದು ಜಾರ್ಜ್ ಹೇಳಿದ್ದಾರೆ. ಬಾಲಕ ತೀವ್ರ ನಿಗಾ ಘಟಕದಲ್ಲಿದ್ದರು ಹಾಗೂ ಪ್ರಜ್ಞೆ ಕಳೆದುಕೊಂಡಿದ್ದರು ಎಂದವರು ಹೇಳಿದ್ದಾರೆ. ಮೃತಪಟ್ಟ ಬಾಲಕ ಮೇ 11ರಂದು ಶಾಲೆಗೆ ತೆರಳಿದ್ದ. ಇದುವರೆಗೂ ರೋಗ ಲಕ್ಷಣ ಇರುವ ಹೆಚ್ಚಿನ ಪ್ರಕರಣಗಳು ಕಂಡುಬಂದಿಲ್ಲ ಎಂದು ಸಚಿವೆ ಜಾರ್ಜ್ ಹೇಳಿದ್ದಾರೆ.

ಈ ನಡುವೆ, ನಿಪಾ ವೈರಸ್ ಪ್ರಕರಣದ ತನಿಖೆಗಾಗಿ ಕೇಂದ್ರ ಸರ್ಕಾರ ಉನ್ನತ ಹಂತದ ಜಂಟಿ ತಂಡವನ್ನು ಕೇರಳಕ್ಕೆ ರವಾನಿಸಿದೆ.

# ತಿಪ್ಪನಾಯಕನಹಳ್ಳಿ ಕೆರೆಗೆ ಬಾಗಿನ ಅರ್ಪಣೆ



**ಹರಪನಹಳ್ಳಿ**

ಹರಪನಹಳ್ಳಿ, ಜು. 21 - ತಾಲ್ಲೂಕಿನ ತಿಪ್ಪನಾಯಕನಹಳ್ಳಿ ಕೆರೆಗೆ ತುಂಗಭದ್ರಾ ನದಿ ನೀರು ಸರಬರಾಜು ಪ್ರಥಮ ಬಾರಿಗೆ ಆಯಿತು. ಕೆರೆಗೆ ಬಾಗಿನ ಅರ್ಪಣೆ ಮಾಡುವುದರ ಮೂಲಕ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕ ದಿವಂಗತ ಎಂ. ಪಿ. ರವೀಂದ್ರ ಅವರನ್ನು ಗ್ರಾಮದ ಜನತೆ ಸ್ಮರಿಸಿಕೊಂಡರು. ಶಾಸಕರಾದ ಲತಾ ಮಲ್ಲಿಕಾರ್ಜುನ್‌ರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್. ಡಿ. ಎಂ. ಸಿ. ಅಧ್ಯಕ್ಷ ಚಿಗಟೇರಿ ಆನಂದ, ಗ್ರಾಮ ಪಂಚಾಯತ್ ಸದಸ್ಯರಾದ ಹೆಚ್ ಕೊಟ್ರೇಶಪ್ಪ, ಛಲವಾದಿ ಪಕ್ಕೀರಪ್ಪ, ಕೆ. ದುರುಗಮ್ಮ, ಗ್ರಾಮದ ಹಿರಿಯ ಗುಡ್ಡಪ್ಪ, ಮುಖಂಡರಾದ ಕೆ.ತಿಮ್ಮಪ್ಪ, ಹೆಚ್. ಮಂಜಪ್ಪ, ಎಂ. ಪರಮೇಶಪ್ಪ, ಡಿ. ಹನುಮಂತಪ್ಪ, ಕೆ. ಶಿವಪ್ಪ, ಸಿ. ಬಸವರಾಜ, ಎಂ. ಪಕ್ಕೀರಪ್ಪ, ಆರ್. ಪಕ್ಕೀರಪ್ಪ, ಬಿ. ಕೃಷ್ಣ, ಟಿ. ವಸಂತ, ಕೆ.ದೊಡ್ಡವೀರಪ್ಪ, ಬಿ. ದ್ಯಾಮಪ್ಪ, ಕೆ. ಸಿದ್ದಪ್ಪ, ಕೆ. ಬಿ. ಪರುಸಪ್ಪ, ಕೆ. ಬಿ. ಬಸಪ್ಪ, ಶಿಕ್ಷಕರಾದ ಮಂಜುನಾಥ್ ಪೂಜಾರ್, ಎ.ಚಂದ್ರಪ್ಪ, ಆರ್. ಎಸ್. ಮಂಜುನಾಥ, ಕೆ.ಟಿ. ಕುಸುಮ ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.

# ಕಳ್ಳರ ಬಂಧನ : 2.20 ಲಕ್ಷ ಮೌಲ್ಯದ ನಗದು, ಬೆಳ್ಳಿ - ಬಂಗಾರದ ಆಭರಣ ವಶ



**ಹರಿಹರ**

ಹರಿಹರ,ಜು.21- ಇಲ್ಲಿನ ಗ್ರಾಮಾಂತರ ಠಾಣೆ ಪೊಲೀಸರು ಷಂಷೀಪುರ ಗ್ರಾಮದ ಪ್ರದೀಪ ಮತ್ತು ಬಸವರಾಜ ಅಲಿಯಾಸ್ ಬಸ್ಯ ಎಂಬುವವರನ್ನು ಬಂಧಿಸಿ ಅವರಿಂದ 2.20 ಲಕ್ಷ ಮೌಲ್ಯದ ಹಣ ಹಾಗೂ ಬೆಳ್ಳಿ- ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ತನಿಖೆ ಮುಂದುವರೆದಿದೆ. ಕಳೆದ ವರ್ಷ ಈ ಕಳ್ಳತನ ಪ್ರಕರಣಗಳು ದಾಖಲಾಗಿದ್ದವು.

ಸರ್ಕಲ್ ಇನ್ಸ್ ಪೆಕ್ಟರ್ ಸುರೇಶ ಸಗರಿ ನೇತೃತ್ವದಲ್ಲಿ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ ಎಸ್. ಕುಪ್ಪೇಲೂರು ಮಾರ್ಗದರ್ಶನದಲ್ಲಿ ಹರಿಹರ ಗ್ರಾಮಾಂತರ ಠಾಣೆ ಸಿಬ್ಬಂದಿಗಳಾದ ಎ.ಎಸ್.ಐ ತಿಪ್ಪೇಸ್ವಾಮಿ, ರಾಮಚಂದ್ರಪ್ಪ, ರಸೂಲ್, ಸಿಬ್ಬಂದಿ ವರ್ಗದ ಕರಿಯಪ್ಪ, ರಮೇಶ, ನೀಲಮೂರ್ತಿ, ಇಲಿಯಾಜ್, ನಾಗರಾಜ, ಚನ್ನಕೇಶವ, ಅರ್ಜುನ ರಾಯಲ್, ಅನಿಲ್ ಕುಮಾರ್ ನಾಯ್ಕ, ಹನುಮಂತ, ನವೀನ್ ಕುಮಾರ್, ಗಂಗಾಧರ ದ್ವಾರಕೇಶ, ನಾಗರಾಜ, ಖುಶಿರಾಜ, ಪ್ರಸನ್ನಕಾಂತ, ಸುರೇಶ, ರಾಮಾಂಜನೇಯ, ರೂಪಾ, ಸಿದ್ದಪ್ಪ ಮುರುಳಿ ಒಳಗೊಂಡ ತಂಡವು ಕಳ್ಳರನ್ನು ಪತ್ತೆಹಚ್ಚಿ ಬಂಧಿಸಿದೆ.


## ಸವಿನೆನಪು




ಕೆ.ಎಂ ಹನುಮಂತರಾಜ್ ಇವರ ಧರ್ಮಪತ್ನಿ

**ಶ್ರೀಮತಿ ಕೆ.ಹೆಚ್ ಗೀತಾ**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸವಿನೆನಪಿನಲ್ಲಿರುವ...

**ಸಹೋದರ : ಬಿ. ಶಿವಕುಮಾರ್, ಶ್ರೀಮತಿ ಮಮತ ಹಾಗೂ ಬಿಂದಪ್ಪ ವಂಶಸ್ಥರು, ಶಾಮನೂರು. ಮತ್ತು ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.**

## ಸವಿನೆನಪು



**ದಿ. ಸಾವಿತ್ರಾ ಬಾಯಿ**


**(ನಿಧನ : 22.07.1974)**

ನಾಗತಿಕಟ್ಟೆ ತಾಂಡಾ, ಹರಪನಹಳ್ಳಿ ತಾಲ್ಲೂಕು

**ನೀವು ನಮ್ಮನ್ನಗಲಿ ಇಂದಿಗೆ ಐವತ್ತು ವರ್ಷಗಳಾದವು. ಸದಾ ನಿಮ್ಮನ್ನು ಸ್ಮರಿಸುತ್ತಾ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ**

ಮಗ : **ಶ್ಯಾಮ್ಯ ನಾಯ್ಕ, ಮೂತಿಬಾಯಿ ವಿದ್ಯಾನಗರ, ದಾವಣಗೆರೆ.**


### ಕೆ.ಎಂ. ಪಂಚಾಕ್ಷರಯ್ಯ ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ಮಠದ ಕೆ.ಎಂ. ಪಂಚಾಕ್ಷರಯ್ಯನವರು ದಿನಾಂಕ 21.7.2024 ರ ಭಾನುವಾರ ಮಧ್ಯಾಹ್ನ 1.10ಕ್ಕೆ ಲಿಂಗೈಕ್ಯರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರವನ್ನು ದಿನಾಂಕ 22.7.2024ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಕುರ್ಕಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.



## ಶ್ರೀಶೈಲಕ್ಕೆ ಶೀಘ್ರದಲ್ಲೇ ರೈಲು ಓಡಾಟ

### ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಭರವಸೆ

ಬೆಂಗಳೂರು, ಜು. 21 - ದಾವಣಗೆರೆ ಜಿಲ್ಲೆಯ ಮತ್ತು ಸುತ್ತಮುತ್ತಲಿನ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ಮತ್ತು ಶ್ರೀಶೈಲ ಪೀಠದ ಭಕ್ತರ ಕೋರಿಕೆಯ ಮೇರೆಗೆ ಶೀಘ್ರವಾಗಿ ದಾವಣಗೆರೆ ಮತ್ತು ಮಾರ್ಕಾಪುರ ರಸ್ತೆಯ ಮುಖಾಂತರ ರೈಲು ಸಂಚಾರ ಪ್ರಾರಂಭ ಮಾಡಲು ಕೇಂದ್ರ ರೈಲ್ವೆ ಸಚಿವರು ಮತ್ತು ರೈಲ್ವೆ ಉನ್ನತ ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ, ರೈಲ್ವೆ ಸಂಚಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ದಾವಣಗೆರೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಭರವಸೆ ನೀಡಿದರು.

ಬೆಂಗಳೂರು ನಗರದಲ್ಲಿ ಗುರು ಪೂರ್ಣಿಮೆ ಅಂಗವಾಗಿ ಶ್ರೀಶೈಲ ಜಗದ್ಗುರುಗಳವರ ಇಷ್ಟಲಿಂಗ ಪೂಜೆ ಮತ್ತು ಧಾರ್ಮಿಕ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ದಾವಣಗೆರೆ ಹಾಗು ಶ್ರೀಶೈಲದ ನಡುವಿನ ರೈಲಿನ ಸಂಪರ್ಕವನ್ನು ಮಾಡಲು ಸದ್ಯ ಈಗ ಶ್ರೀಶೈಲಕ್ಕೆ ಸಮೀಪವಿರುವ ಮಾರ್ಕಾಪುರ ರಸ್ತೆಯವರೆಗೂ ಮಾತ್ರ ಅವಕಾಶವಿದೆ. ಹಾಗಾಗಿ ದಾವಣಗೆರೆಯಿಂದ ನೇರವಾಗಿ ಮಾರ್ಕಾಪುರ ರಸ್ತೆ ಮುಖಾಂತರ ರೈಲಿನ ಸಂಚಾರ ಆರಂಭವಾದರೆ ಜನರಿಗೆ ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಷಿ, ಸಮಾಜದ ಮುಖಂಡರಾದ ಬಿ.ಎಸ್.ಪರಮಶಿವಯ್ಯ, ಗುರುಸ್ವಾಮಿ, ಆರ್.ಟಿ ಪ್ರಶಾಂತ್, ಪಾಲ್ಗೊಂಡಿದ್ದರು.

## ಬೆದರಿಕೆಯಿಂದ ಕೇಂದ್ರ ಸರ್ಕಾರ ರಚಿಸಲಾಗಿದೆ : ಮಮತಾ

ಕೊಲ್ಕತ್ತಾ, ಜು. 21 - ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಹೆಚ್ಚು ದಿನ ಮುಂದುವರೆಯುವುದಿಲ್ಲ ಹಾಗೂ ಅದು ಶೀಘ್ರವೇ ಪತನಗೊಳ್ಳಲಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭವಿಷ್ಯ ನುಡಿದಿದ್ದಾರೆ. ತೃಣಮೂಲ ಕಾಂಗ್ರೆಸ್ ಪಕ್ಷದ ಹುತಾತ್ಮರ ಸಮಾವೇಶದಲ್ಲಿ ಮಾತನಾಡಿದ ಅವರು, ಬೆದರಿಕೆಯ ಮೂಲಕ ಕೇಂದ್ರ ಸರ್ಕಾರವನ್ನು ರಚಿಸಲಾಗಿದೆ ಎಂದು ಆರೋಪಿಸಿದರು.

ಎನ್.ಡಿ.ಎ. ಮಿತ್ರ ಪಕ್ಷಗಳು ಹಣಕಾಸು ಲಾಭಕ್ಕಾಗಿ ಸಚಿವ ಸ್ಥಾನಗಳನ್ನು ಬಿಟ್ಟುಕೊಟ್ಟಿವೆ ಎಂದೂ ಅವರು ಆರೋಪಿಸಿದರು.

# ಕಾನೂನಿನಡಿಯಲ್ಲಿ ಭೋವಿ ಸಮಾಜವನ್ನು ಸಮರ್ಥಗೊಳಿಸಲು ಬದ್ಧ

### ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ದೀಕ್ಷಾ ರಜತ ಮಹೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ





ಚಿತ್ರದುರ್ಗ, ಜು. 21 - ಕುಲ ಕಸುಬನ್ನೇ ನಂಬಿ ಬದುಕುತ್ತಿರುವ ಭೋವಿ ಸಮಾಜವನ್ನು ಸಾಮಾಜಿಕವಾಗಿ ಸಮರ್ಥಗೊಳಿಸಲು ಕಾನೂನು ಅಡಿಯಲ್ಲೇ ಏನೆಲ್ಲಾ ಅವಕಾಶವಿದೆಯೋ ಅದನ್ನೆಲ್ಲಾ ಮಾಡುತ್ತೇನೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಇಲ್ಲಿನ ಭೋವಿ ಗುರುಪೀಠದಲ್ಲಿ ನಿನ್ನೆ ಏರ್ಪಾಡಾಗಿದ್ದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ದೀಕ್ಷಾ ರಜತ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಪೀಠಾಧಿಪತಿಗಳಾಗಿ 25 ವರ್ಷಗಳನ್ನು ಪೂರೈಸಿ, ಸಮಾಜವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಇನ್ನು ನೂರು ಕಾಲ ಬಾಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದರು.

ವಿದ್ಯೆಯಿಂದ ಮಾತ್ರ ಆರ್ಥಿಕ, ಸಾಮಾಜಿಕವಾಗಿ ಮೇಲೆ ಬರಬಹುದು. ಸಂವಿಧಾನದಡಿ ಅಕ್ಷರ ಕಲಿಯಲು ಎಲ್ಲರಿಗೂ ಅವಕಾಶವಿದೆ. ಭೋವಿ ಸಮಾಜದಲ್ಲಿ ಹುಟ್ಟಿದವರು ಉನ್ನತ ಅಧಿಕಾರಿಗಳಾಗಬಹುದು. ದಾಸ್ಯ ಪದ್ಧತಿಯಿಂದ ಈಗಲೂ ಅನೇಕರು ಗುಲಾಮಗಿರಿಯಲ್ಲಿದ್ದಾರೆ. ಗುಲಾಮಗಿರಿ ಮನಸ್ಥಿತಿ ಬದಲಾಗಬೇಕಾದರೆ, ಶಿಕ್ಷಣವಂತರಾಗಿ ಸ್ವಾಭಿಮಾನದಿಂದ ಬದುಕುವುದನ್ನು ಕಲಿಯಬೇಕೆಂದು ಭೋವಿ ಸಮುದಾಯಕ್ಕೆ ಕರೆ ನೀಡಿದರು.

ಭೋವಿ ಅಭಿವೃದ್ಧಿ ನಿಗಮ ರಚಿಸಿದ್ದು, ನಾವು, ದೇವಯ್ಯನನ್ನು ಕೆ.ಪಿ.ಎಸ್ಸಿ. ಸದಸ್ಯನಾಗಿ ಮಾಡಿದ್ದೇನೆ. ಭೋವಿ ಅಭಿವೃದ್ದಿ ನಿಗಮವನ್ನು ಭೋವಿ ವಡ್ಡರ ನಿಗಮ ಎಂದು ನಾಮಕರಣ ಮಾಡೋಣ. ಸಿದ್ದರಾಮೇಶ್ವರ ಅಧ್ಯಯನ ಪೀಠ ಮಾಡಲಾಗಿದೆ. ಭೋವಿ ಜನಾಂಗದಿಂದ ವಿಧಾನಪರಿಷತ್ ನಾಮ ನಿರ್ದೇಶನ ಮಾಡಿ, ಭೋವಿ ಅಭಿವೃದ್ದಿ ನಿಗಮಕ್ಕೆ ಅನುದಾನ ಮೀಸಲಿಡಲಾಗುವುದು ಎಂದು ಮುಖ್ಯಮಂತ್ರಿಗಳು ವಾಗ್ದಾನ ಮಾಡಿದರು.

ಮಂತ್ರಾಲಯದ ಶ್ರೀ ಸುಬುಧೇಂದ್ರ ಸ್ವಾಮೀಜಿ ಮಾತನಾಡಿ, ಭೋವಿ ಸಮುದಾಯದವರು ಶ್ರಮ ಜೀವಿಗಳು, ಇಂತಹ ಜನಾಂಗವನ್ನು ಬಿಟ್ಟು, ಬೇರೆ ಯಾವ ಸಮಾಜವೂ ಏನು ಮಾಡಲು ಆಗಲ್ಲ. ಭೋವಿ ಸಮುದಾಯದ ಏಳಿಗೆಗೆ ಗುರುಪೀಠ ಸ್ಥಾಪಿಸಿಕೊಂಡು, ಕಳೆದ 25 ವರ್ಷಗಳಿಂದಲೂ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮುನ್ನಡೆಸಿಕೊಂಡು ಹೋಗುತ್ತಿರುವುದು ಸುಲಭದ ಕೆಲಸವಲ್ಲ. ಅನ್ನ, ಅಕ್ಷರ, ಆರ್ಥಿಕ ಸಂಕಷ್ಟ ಪರಿಹರಿಸುವಲ್ಲಿ ದೃಢ ಸಂಕಲ್ಪ ತೊಟ್ಟಿದ್ದಾರೆ. ಸ್ವಾಮೀಜಿಯವರದು ಉತ್ತಮ ವ್ಯಕ್ತಿತ್ವ ಎಂದು ಆಶೀರ್ವಚನ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜನಪರ ಯೋಜನೆಗಳನ್ನು ಹಾಕಿಕೊಂಡು ರಾಜ್ಯವನ್ನು ಮುನ್ನಡೆಸುತ್ತಿದ್ದಾರೆ. ಮಂತ್ರಾಲಯ ಜಾತ್ಯತೀತ ಕ್ಷೇತ್ರ ಹಿಂದೂ, ಮುಸಲ್ಮಾನ, ಕ್ರೈಸ್ತರು ನಮ್ಮಲ್ಲಿಗೆ ಬರುತ್ತಾರೆ. ಮುಂದಿನ ತಿಂಗಳು ನಡೆಯುವ ಜಾತ್ರೆಗೆ ಬನ್ನಿ ಎಂದು ಮುಖ್ಯಮಂತ್ರಿಗಳನ್ನು ಮಂತ್ರಾಲಯಕ್ಕೆ ಆಹ್ವಾನಿಸಿದರು.

ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ಬಸವಣ್ಣ ಯುಗ ಯುಗಗಳ ಸಾಂಸ್ಕೃತಿಕ ನಾಯಕನಾದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಈಗಿನ ಕಾಲದ ಸಾಂಸ್ಕೃತಿಕ ನಾಯಕ ಎಂದು ಬಣ್ಣಿಸಿದರು.

ದೀಕ್ಷಾ ರಜತ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವ ಶಿವರಾಜ್ ತಂಗಡಗಿ, ಭೋವಿ ಅಭಿವೃದ್ದಿ ನಿಗಮಕ್ಕೆ ಐದು ನೂರು ಕೋಟಿ ರೂ.ಗಳನ್ನು ಮೀಸಲಿಡಬೇಕು. ಕೆ.ಪಿ.ಸಿ.ಸಿ. ಮೆಂಬರ್, ವಿಧಾನ ಪರಿಷತ್‌ಗೆ ನಾಮನಿರ್ದೇಶನ, ನಮ್ಮ ಜನಾಂಗದವರು ಸಂಸದರಾಗಬೇಕೆಂಬ ಬೇಡಿಕೆಯಿಟ್ಟಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಲ್ಲವನ್ನು ಈಡೇರಿಸಿದ್ದಾರೆ. ನಿಮ್ಮ ಜೊತೆ ನಾವಿರುತ್ತೇವೆ. ನಮ್ಮ ಮಠಕ್ಕೆ ವಿಶೇಷ ಅನುದಾನ ಕೊಡಿ ಎಂದು ಕೋರಿದರು.

ಭೋವಿಗಳು ಕೆರೆ ಕಟ್ಟೆ ಕಟ್ಟುವುದು ಕಲ್ಲು ಹೊಡೆಯುವುದು ಕುಲ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ದುಶ್ಚಟಗಳಿಂದ ದೂರವಿರುವಂತೆ ಸ್ವಾಮೀಜಿಗಳು ಜಾಗೃತಿ ಮೂಡಿಸುತ್ತಿದ್ದಾರೆ. ಹದಿನಾಲ್ಕನೆ ವಯಸ್ಸಿನಲ್ಲಿಯೇ ಸ್ವಾಮೀಜಿಯಾಗಿ ದೀಕ್ಷೆ ಪಡೆದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ 25 ವರ್ಷಗಳನ್ನು ಕಳೆದಿದ್ದಾರೆ. ಜನಾಂಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕುಲ ಕಸುಬಿಗೆ ಕೊಡಲಿ ಪೆಟ್ಟು ಬಿದ್ದಿದೆ. ಕಲ್ಲು ಒಡೆಯಲು ಅವಕಾಶ ಮಾಡಿಕೊಡಿ. ಅರಣ್ಯ ಇಲಾಖೆಯವರ ಕಿರುಕುಳ ತಪ್ಪಿಸಿ ಭೋವಿ ಅಭಿವೃದ್ದಿ ನಿಗಮಕ್ಕೆ ಐದು ನೂರು ಕೋಟಿ ರೂ. ಅನುದಾನ ಕೊಡಿ ಎಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸಿದರು.

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕರುಗಳಾದ ಡಾ.ಎಂ. ಚಂದ್ರಪ್ಪ, ಕೆ.ಸಿ.ವೀರೇಂದ್ರ ಪಪ್ಪಿ, ಟಿ. ರಘುಮೂರ್ತಿ, ಎ.ಸಿ.ಶ್ರೀನಿವಾಸ್, ವಿ. ವೆಂಕಟೇಶ್, ಕೋಲಾರ ಸಂಸದ ಮಲ್ಲೇಶ್‌ಬಾಬು, ಭೋವಿ ಅಭಿವೃದ್ದಿ ನಿಗಮದ ಅಧ್ಯಕ್ಷ ರವಿಕುಮಾರ್, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಆದಿಜಾಂಬವ ಅಭಿವೃದ್ದಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ದ್ರಾಕ್ಷಾ ರಸ ಮಂಡಳಿ ಅಧ್ಯಕ್ಷ ಬಿ.ಯೋಗೇಶ್‌ಬಾಬು, ನ್ಯಾಯವಾದಿ ಶಂಕರಪ್ಪ, ನಾರಾಯಣಸ್ವಾಮಿ, ಸೀತಾರಾಮಪ್ಪ ಸೇರಿದಂತೆ ಭೋವಿ ಸಮಾಜದ ಅನೇಕ ಮುಖಂಡರುಗಳು ಉಪಸ್ಥಿತರಿದ್ದರು.

### ಉದ್ಯೋಗ ಭಾಗ್ಯ ನೀಡಲಿ...

ಭೋವಿ ಜನಾಂಗ ಕಲ್ಲು ಕ್ರಶರ್, ಕ್ವಾರಿಗಳಲ್ಲಿ ಕೆಲಸ ಮಾಡಲು ಉದ್ಯೋಗ ಭಾಗ್ಯ ನೀಡಬೇಕು. ಅದಕ್ಕಾಗಿ ಶೇ.50 ರಷ್ಟು ಮೀಸಲಾತಿ ಕೊಡಬೇಕು. ಭೋವಿ ಅಭಿವೃದ್ದಿ ನಿಗಮ ಎಂಬುದರ ಬದಲು ಭೋವಿ ವಡ್ಡರ ನಿಗಮ ಎಂದು ಮರು ನಾಮಕರಣ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರಮ ಕೈಗೊಳ್ಳಬೇಕು.

**- ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ,**
ಭೋವಿ ಗುರುಪೀಠ

## ಹೆಚ್ಚುತ್ತಿರುವ ಡೆಂಗ್ಯೂ : ಲಾರ್ವಾ ಸಮೀಕ್ಷೆ, ಜಾಗೃತಿ



**ಜಗಳೂರು**

ಜಗಳೂರು, ಜು. 21 - ಟಾಸ್ಕ್ ಫೋರ್ಸ್ ಸಮಿತಿ ನೇತೃತ್ವದಲ್ಲಿ ಪಟ್ಟಣದ ಭುವನೇಶ್ವರಿ ವೃತ್ತ, ಆಸ್ಪತ್ರೆ ಸುತ್ತಮುತ್ತ ಸ್ವಚ್ಛತೆಗೊಳಿಸುವ ಮೂಲಕ ವಿವಿಧ ವಾರ್ಡ್‌ಗಳಲ್ಲಿ ಅಧಿಕಾರಿಗಳು ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸುವ ಮೂಲಕ ಲಾರ್ವ ಸಮೀಕ್ಷೆ ನಡೆಸಲಾಯಿತು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಮಾತನಾಡಿ, ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿದ್ದು, ಶುದ್ದ ಕುಡಿಯುವ ನೀರನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು. ಮನೆಯ ಸುತ್ತಮುತ್ತ ಚರಂಡಿಗಳಿಗೆ ಕಸ ವಿಲೇವಾರಿ ಮಾಡದೇ ಪಟ್ಟಣ ಪಂಚಾಯಿತಿಯ ಕಸದ ವಾಹನದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಹಸಿಕಸ, ಒಣಕಸ ವಿಂಗಡಿಸಿ ವಿಲೇವಾರಿ ಮಾಡಬೇಕು. ಪೌರ ಕಾರ್ಮಿಕರೊಂದಿಗೆ ಸ್ವಚ್ಛತೆಗೆ ಸಹಕರಿಸಬೇಕು. ಮಹಾಮಾರಿ ಡೆಂಗ್ಯೂ ಜ್ವರದ ಪ್ರಕರಣಗಳು ಕಂಡುಬರದಂತೆ ಮುಂಜಾಗ್ರತೆ ವಹಿಸಬೇಕು' ಎಂದು ಮನವಿ ಮಾಡಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ವಿಶ್ವನಾಥ್ ಮಾತನಾಡಿ,'ರಾಜ್ಯವ್ಯಾಪಿ ಡೆಂಗ್ಯೂ ವೈರಸ್ ಸೋಂಕು ಹರಡುತ್ತಿದ್ದು. ತಾಲ್ಲೂಕಿನಲ್ಲಿ ಅತಿ ಕಡಿಮೆ ಡೆಂಗ್ಯೂ ಪ್ರಕರಣಗಳು ಕಂಡು ಬಂದಿವೆ. ಸಾರ್ವಜನಿಕರು ಆತಂಕ ತೊರೆದು, ಚಿಕ್ಕ ಮಕ್ಕಳು,ವಯೋವೃದ್ದರನ್ನು ಅನಗತ್ಯ ಹೊರಗಡೆ ಸುತ್ತಾಡಿಸದೇ ಸುರಕ್ಷಿತವಾಗಿ ನೋಡಿಕೊಳ್ಳಿ. ಇತ್ತೀಚೆಗೆ ಪಟ್ಟಣದಲ್ಲಿ ಜ್ವರದಿಂದ ಸಾವನ್ನಪ್ಪಿದ ಯುವತಿ ಡೆಂಗ್ಯೂ ಜ್ವರದಿಂದ ಅಲ್ಲ ಎಂದು ಬಳ್ಳಾರಿ ಖಾಸಗಿ ಆಸ್ಪತ್ರೆ ವರದಿ ನೀಡಿದೆ' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ.ಪಂ. ಸದಸ್ಯ ಲುಕ್ಮಾನ್, ಆರೋಗ್ಯ ನಿರೀಕ್ಷಕ ಪ್ರಶಾಂತ್ ಕುಮಾರ್ ಸೇರಿದಂತೆ ಆಶಾ ಕಾರ್ಯಕರ್ತೆಯರು, ನರ್ಸ್‌ಗಳು ಇದ್ದರು.

ಪಟ್ಟಣದಲ್ಲಿ ರೇಖಾ (19) ಜ್ವರದಿಂದ ಬಳಲಿ ಸಾವಿಗೀಡಾದ ನಂತರ ಎಚ್ಚೆತ್ತುಕೊಂಡ ಅಧಿಕಾರಿಗಳು ಡೆಂಗ್ಯೂ ಟಾಸ್ಕ್ ಫೋರ್ಸ್‌ಮಿತಿ ಪಟ್ಟಣದಲ್ಲಿ ಜಾಗೃತಿ, ಲಾರ್ವಾ ಸಮೀಕ್ಷೆ ಕಾರ್ಯವನ್ನು ಚುರುಕುಗೊಳಿಸಿದೆ.

## ಭಾವಸಾರ ವಿಜನ್ ಎಜುಕೇಶನ್ ಟ್ರಸ್ಟ್‌ನಿಂದ ಸ್ಕಾಲರ್‌ಶಿಪ್‌ಗೆ ಅರ್ಜಿ

ದಾವಣಗೆರೆ, ಜು.21- ನಗರದ ಭಾವಸಾರ ವಿಜನ್ ಎಜುಕೇಶನ್ ಟ್ರಸ್ಟ್ ವತಿಯಿಂದ ಭಾವಸಾರ ಕ್ಷತ್ರೀಯ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಎಸ್ಸೆಸ್ಸೆಲ್ಸಿ ದ್ವಿತೀಯ ಪಿ.ಯು.ಸಿ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಶೀಪ್ ನೀಡಲಾಗು ವುದು.

ಇದೇ ದಿನಾಂಕ 29 ರೊಳಗೆ ನಿಗದಿತ ಅರ್ಜಿಯನ್ನು ನಗರದ ಮಹಾರಾಜಪೇಟೆ ಯಲ್ಲಿರುವ ಶ್ರೀ ವಿಠಲ ಮಂದಿ ರದ ವ್ಯವಸ್ಥಾಪಕರಲ್ಲಿ ಪಡೆದು ಇದೇ ದಿನಾಂಕ 30 ರೊಳಗೆ ಭರ್ತಿ ಮಾಡಿದ ಅರ್ಜಿಯನ್ನು ವ್ಯವಸ್ಥಾಪಕ ರಲ್ಲಿ ಸಲ್ಲಿಸುವಂತೆ ಟ್ರಸ್ಟ್ ಅಧ್ಯಕ್ಷ ವಾಗೀಶಬಾಬು ಗುಜ್ಜರ್ ತಿಳಿಸಿದ್ದಾರೆ.

## ತೇವಾಂಶ ವಾತಾವರಣಕ್ಕೆ ಈರುಳ್ಳಿಗೆ ನೇರಳೆ ಎಲೆ ಮಚ್ಚೆ ರೋಗ



ಜಗಳೂರು, ಜು.21- ಮೋಡ ಕವಿದ ವಾತಾವರಣ ಹಾಗೂ ಅಧಿಕ ತೇವಾಂ ಶದಿಂದಾಗಿ ಈರುಳ್ಳಿ ಬೆಳೆಗೆ ನೇರಳೆ ಎಲೆ ಮಚ್ಚೆ ರೋಗ ಬಾಧೆ ಎದುರಾಗಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ತಿಳಿಸಿದರು.

ಜಗಳೂರು ತಾಲ್ಲೂಕಿನ ನಿಬಗೂರು, ಕಲ್ಲೇದೇವರಪುರ ಮತ್ತು ಬಸಪ್ಪನಹಟ್ಟಿ ಗ್ರಾಮ ವ್ಯಾಪ್ತಿಯ ಈರುಳ್ಳಿ ತಾಕುಗಳಿಗೆ ಭೇಟಿ ನೀಡಿ ರೈತರೊಂದಿಗೆ ಮಾತನಾಡಿದರು.

ಪ್ರಸ್ತುತ ಜಗಳೂರು ತಾಲ್ಲೂಕಿನಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ 268 ಮಿ.ಮೀ ಮಳೆಯಾಗಿದೆ. ವಾಡಿಕೆಗಿಂತ 199ಮಿ.ಮೀ ಮಳೆ ಹೆಚ್ಚಾದ ಕಾರಣ ಈರುಳ್ಳಿ ಬೆಳೆದ ಪ್ರದೇಶಗಳಲ್ಲಿ ತೇವಾಂಶ ಹೆಚ್ಚಾಗಿದೆ. ಆದ್ದರಿಂದ ಆಲ್ಟರ್‌ನೇರಿಯಾ ಪೋರಿ ಎಂಬ ಶಿಲೀಂಧ್ರದಿಂದ ನೇರಳೆ ಎಲೆ ಮಚ್ಚೆ ರೋಗ ಉಲ್ಬಣಗೊಳ್ಳುತ್ತದೆ ಎಂದು ಮಾಹಿತಿ ನೀಡಿದರು.

ಎಲೆಯ ಮೇಲೆ ಸಣ್ಣ ಚುಕ್ಕೆ ಕಾಣಿಸಿಕೊಂಡು ಕ್ರಮೇಣ ಅಂಗಮಾರಿಯ ಲಕ್ಷಣ ಹೊಂದಿ, ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ ಮತ್ತು ಗಡ್ಡೆಯ ಬೆಳವಣಿಗೆ ಮೇಲೆ ಪರಿಣಾಮ ಬೀರುವ ಜತೆಗೆ ಇಳುವರಿ ಕುಂಠಿತವಾಗಲಿದೆ ಎಂದು ತಿಳಿಸಿದರು. ಇದರ ನಿಯಂತ್ರಣಕ್ಕೆ ಶಿಲೀಂಧ್ರ ನಾಶಕ ಪ್ರೋಪಿಕೊನೋ ಜೋಲ್ 1 ಮಿಲೀ ಅಥವಾ ಡೈಪೆನ್‌ಕೋನೋಜೋಲ್ 25% ಇಸಿ 1 ಮಿಲೀ ಪ್ರತೀ ಲೀಟರ್ ನೀರಿಗೆ ಬೆರೆಸಿ ಅಂಟು ದ್ರಾವಣ ಹಾಕಿ ಸಿಂಪರಣೆ ಮಾಡಬೇಕು ಎಂದರು.

**ಜಗಳೂರು ತಾಲ್ಲೂಕಿನ ರೈತರೊಂದಿಗಿನ ಸಂವಾದದಲ್ಲಿ ದಾವಣಗೆರೆಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ**

ಮೇಲು ಗೊಬ್ಬರವಾಗಿ ಸಾರ ಜನಕಯುಕ್ತ ಗೊಬ್ಬರ ಕಡಿಮೆ ಮಾಡಿ, ಸಲ್ಫೇಟ್ ಆಫ್ ಪೊಟ್ಯಾಷ್ ಗೊಬ್ಬರ ವನ್ನು ಪ್ರತೀ ಎಕರೆಗೆ 20 ಕೆ.ಜಿ ನೀಡಬೇಕೆಂದು ಕೇಂದ್ರದ ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ.ಟಿ.ಜಿ. ಅವಿನಾಶ್ ತಿಳಿಸಿದರು. ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಬಿದರಕೆರೆ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಕೃಷ್ಣ ಮೂರ್ತಿ, ರೈತ ಶಶಿಕುಮಾರ್, ನಾಗರಾಜ, ಗುರುಸಿದ್ದನಗೌಡ ಇದ್ದರು.

# 'ನೀಲಿ ತೆರೆಯ ಸಾವು' ಬಾರಿಸಿದ ಎಚ್ಚರಿಕೆಯ ಗಂಟೆ

### ವಿಶ್ವದಾದ್ಯಂತ ಮೈಕ್ರೋಸಾಫ್ಟ್ ವ್ಯತ್ಯಯದಿಂದ ಪಾಠ ಕಲಿಯಬೇಕು ಎನ್ನುವ ಟೆಕ್ ಪರಿಣಿತರು

ನವದೆಹಲಿ, ಜು. 21 - ಶುಕ್ರವಾರದಂದು ವಿಶ್ವದಾದ್ಯಂತ ಕಂಪ್ಯೂಟರ್ ಜಾಲ ಸಮಸ್ಯೆ ಎದುರಿಸಿದ್ದು, ನಾವು ಜಾಗತಿಕವಾಗಿ ಎಷ್ಟು ಬೆಸೆದುಕೊಂಡಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಅಮೆರಿಕದ ಕಂಪನಿಯೊಂದರ ಸಾಫ್ಟ್‌ವೇರ್ ಅಪಡೇಟ್‌ನಲ್ಲಿ ಆದ ಲೋಪ ಜಾಗತಿಕ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯೇ ಮುಗ್ಗರಿಸುವಂತೆ ಮಾಡಿತ್ತು. ಆಧುನಿಕ ಜಗತ್ತಿನಲ್ಲಿ ಒಂದು ಸಣ್ಣ ವೈಫಲ್ಯ ಎಷ್ಟು ದೂರಗಾಮಿ ಪರಿಣಾಮ ಬೀರುತ್ತದೆ ಎಂಬುದಕ್ಕೆ ಇದು ಉದಾಹರಣೆ.

ಎತ್ತಣದ ಸಾಫ್ಟ್‌ವೇರ್ ಕಂಪನಿಯು ಮತ್ತಿಂದೆತ್ತಣದ ಕಂಪ್ಯೂಟರ್‌ನಲ್ಲಿ ಬೆಸೆದುಕೊಂಡು, ಇನ್ನೊಂದೆತ್ತಣದಲ್ಲಿರುವ ಅಮಾಯಕರಿಗೆ ಸಮಸ್ಯೆ ತರುವುದಕ್ಕೆ ಶುಕ್ರವಾರದ ಘಟನೆಯೇ ಉದಾಹರಣೆ.

ಸೈಬರ್ ಸುರಕ್ಷತಾ ಕಂಪನಿಯಾದ ಕ್ರೌಡ್‌ಸ್ಟ್ರೈಕ್ ಫಾಲ್ಕನ್‌ನ ಸ್ವಯಂ ಚಾಲಿತ ಅಪಡೇಟ್‌ನಲ್ಲಿ ಲೋಪವಾಗಿದ್ದೇ ಜಾಗತಿಕವಾಗಿ ಸಮಸ್ಯೆ ಭುಗಿಲೇಳಲು ಕಾರಣ. ಕ್ರೌಡ್‌ಸ್ಟ್ರೈಕ್ ತಂತ್ರಾಂಶವನ್ನು ಬೃಹತ್ ಸಂಘಟನೆಗಳೇ ಬಳಸುತ್ತವೆ.

ಕ್ರೌಡ್‌ಸ್ಟ್ರೈಕ್ ತಂತ್ರಾಂಶವು ಮೈಕ್ರೋಸಾಫ್ಟ್‌ನ ವಿಂಡೋಸ್‌ನಲ್ಲಿ ಕಾರ್ಯನಿರ್ವಹಿಸುತ್ತದೆ. ವಿಂಡೋಸ್ ವಿಶ್ವದ ಅತಿ ಹೆಚ್ಚು ಬಳಕೆಯಾಗುವ ತಂತ್ರಾಂಶ. ಹೀಗಾಗಿ ಕ್ರೌಡ್‌ಸ್ಟ್ರೈಕ್ ಲೋಪ ವಿಶ್ವದಾದ್ಯಂತದ ಮೈಕ್ರೋಸಾಫ್ಟ್ ವ್ಯವಸ್ಥೆ ಕುಸಿಯುವಂತೆ ಮಾಡಿತ್ತು.

**ಏಕಸ್ವಾಮ್ಯವೇ ಸಮಸ್ಯೆ :** ವಿಂಡೋಸ್ ತಂತ್ರಾಂಶವು ಕಂಪ್ಯೂಟರ್ ವ್ಯವಸ್ಥೆಯಲ್ಲಿ ಬಹುತೇಕ ಏಕಸ್ವಾಮ್ಯದಂತೆ ಕಾರ್ಯನಿರ್ವಹಿಸುತ್ತಿದೆ. ಸಾಕಷ್ಟು ದೈತ್ಯ ಕಂಪನಿಗಳು ಕಂಪ್ಯೂಟರ್ ನೆಟ್‌ವರ್ಕ್ ರಕ್ಷಣೆಗಾಗಿ ಕ್ರೌಡ್‌ಸ್ಟ್ರೈಕ್ ಅನ್ನೇ ಬಳಸುತ್ತವೆ. ಒಂದೇ ರೀತಿಯ ವ್ಯವಸ್ಥೆಗಳ ಬಳಕೆ ಸಮಸ್ಯೆ ಉಲ್ಬಣಿಸಲು ಕಾರಣ ಎಂದು ಕಂಪ್ಯೂಟರ್ ಪರಿಣಿತರು ವಿಶ್ಲೇಷಿಸುತ್ತಿದ್ದಾರೆ.

### ಸುರಕ್ಷತೆಗೆ ಅಳವಡಿಸಿಕೊಂಡ ಸಾಫ್ಟ್‌ವೇರೇ ಸಮಸ್ಯೆಯಾಯಿತು



ವೈಯಕ್ತಿಕ ಕಂಪ್ಯೂಟರ್‌ಗಳಿಗೆ ವೈರಸ್ ಸೋಂಕು ತಗುಲದೇ ಇರಲಿ ಎಂದು ಆಂಟಿ ವೈರಸ್‌ಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಅದೇ ರೀತಿ ಬೃಹತ್ ಸಂಸ್ಥೆಗಳು ತಮ್ಮ ಕಂಪ್ಯೂಟರ್ ವ್ಯವಸ್ಥೆಗೆ ಎಂಡ್‌ಪಾಯಿಂಟ್ ಡಿಟೆಕ್ಷನ್ ಅಂಡ್ ರೆಸ್ಪಾನ್ಸ್ (ಇ.ಡಿ.ಆರ್.) ತಂತ್ರಾಂಶ ಬಳಸಿಕೊಳ್ಳುತ್ತವೆ.

ಮಾಲ್‌ವೇರ್ ರೀತಿಯ ದಾಳಿ ನಡೆಯದಂತೆ ತಡೆಯಲು ಇ.ಡಿ.ಆರ್. ಉಪಯುಕ್ತವಾಗಿದೆ. ಸಮಸ್ಯೆ ಕಂಡು ಬಂದಾಗ ಇ.ಡಿ. ಆರ್. ತ್ವರಿತವಾಗಿ ಪ್ರತಿಕ್ರಿಯಿಸುತ್ತದೆ. ಇಂತಹ ಇ.ಡಿ.ಆರ್. ಸೇವೆ ಒದಗಿಸುವ ಕಂಪನಿಗಳಲ್ಲಿ ಕ್ರೌಡ್‌ಸ್ಟ್ರೈಕ್ ಫಾಲ್ಕನ್ ಸಹ ಒಂದಾಗಿದೆ.

ಫಾಲ್ಕನ್ ತಂತ್ರಾಂಶ ಕಾರ್ಯನಿರ್ವಹಿಸಲು ವಿಂಡೋಸ್‌ನ ಉನ್ನತ ಮಟ್ಟದ ಅನುಮತಿ ಪಡೆದಿರುತ್ತದೆ. ಕಂಪ್ಯೂಟರ್‌ನ ಸಾಕಷ್ಟು ಮಾಹಿತಿ ಹಾಗೂ ಆಂತರಿಕ ವ್ಯವಸ್ಥೆ ನಿರ್ವಹಣೆಯ ಅನುಮತಿ ಫಾಲ್ಕನ್‌ಗೆ ದೊರೆತಿರುತ್ತದೆ. ಕಂಪ್ಯೂಟರ್‌ನಲ್ಲಿ ನಿರ್ವಹಿಸುವ ಪ್ರೋಗ್ರಾಂ, ಯಾವ ಫೈಲ್ ಬಳಕೆಯಾಗುತ್ತಿದೆ ಎಂಬುದೂ ಸೇರಿದಂತೆ ಸಾಕಷ್ಟು ವಿಷಯಗಳು ಫಾಲ್ಕನ್ ನಿಗಾದಲ್ಲಿರುತ್ತದೆ. ಹೀಗಾಗಿ ಫಾಲ್ಕನ್ ಆಂಟಿವೈರಸ್ ತಂತ್ರಾಂಶಕ್ಕಿಂತಲೂ ಉನ್ನತ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಯಾವುದಾದರೂ ಬೆದರಿಕೆ ಎದುರಾದಾಗ ಫಾಲ್ಕನ್ ತಂತ್ರಾಂಶವು ತಕ್ಷಣವೇ ಅಂತಹದ್ದನ್ನು ಸ್ವಯಂಚಾಲಿತವಾಗಿ ತಡೆಯುತ್ತದೆ. ಹೀಗಾಗಿ ಮೈಕ್ರೋಸಾಫ್ಟ್ ತಂತ್ರಾಂಶದಲ್ಲಿ ಫಾಲ್ಕನ್ ಉನ್ನತ ಮಟ್ಟದಲ್ಲಿ ಬೆಸೆದುಕೊಂಡಿದೆ. ಸುದೀರ್ಘ ಕಾಲದಿಂದ ಕಂಪ್ಯೂಟರ್ ಜಾಲವನ್ನು ರಕ್ಷಿಸುತ್ತಾ ಬಂದಿದ್ದ ಫಾಲ್ಕನ್, ಈಗ ಸಮಸ್ಯೆಗೆ ತಾನೇ ಕಾರಣವಾಗಿದ್ದು ವಿಪರ್ಯಾಸ.

ಇದರ ಜೊತೆಗೆ, ಆಧುನಿಕ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳು ಪರಸ್ಪರ ಬೆಸೆದುಕೊಂಡಿವೆ ಹಾಗೂ ಪರಸ್ಪರ ಅವಲಂಬಿಸಿವೆ. ಒಂದೆಡೆ ಆಗುವ ವೈಫಲ್ಯ ಇಡೀ ವ್ಯವಸ್ಥೆಯಲ್ಲಿ ಸರಣಿ ಪರಿಣಾಮಗಳಿಗೆ ಕಾರಣವಾಗುತ್ತದೆ. ಒಂದು ಸಣ್ಣ ಅಪಡೇಟ್‌ನಲ್ಲಿ ಆದ ಸಮಸ್ಯೆ ಊಹಿಸಲಾಗದ ಸವಾಲುಗಳನ್ನು ತಂದಿದೆ.

ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳುವವರು ಪ್ರತಿಕ್ರಿಯೆ ನೀಡುವ ಮೊದಲೇ, ಜಾಗತಿಕವಾಗಿ ಸಮಸ್ಯೆ ಹರಡಿದೆ.

**ನೀಲಿ ತೆರೆಯ ಸಾವು :** ಮೈಕ್ರೋಸಾಫ್ಟ್‌ನ ವಿಂಡೋಸ್ ಕಂಪ್ಯೂಟರ್‌ಗಳು ವಿಶ್ವದಾದ್ಯಂತ 'ನೀಲಿ ತೆರೆಯ ಸಾವು' ಸಂದೇಶ ನೀಡಲು ಆರಂಭಿಸಿದಾಗ, ಇದು ಮೈಕ್ರೋಸಾಫ್ಟ್ ಸಮಸ್ಯೆಯೇ ಇರಬೇಕು ಎಂದು ಶಂಕಿಸಲಾಗಿತ್ತು.

ಅಮೆರಿಕ ವಲಯದಲ್ಲಿ ತನ್ನ ಕ್ಲೌಡ್ ಸೇವೆಯಲ್ಲಿ ವ್ಯತ್ಯಯವಾಗಿದೆ ಎಂದು ಮೈಕ್ರೋಸಾಫ್ಟ್ ಸಹ ಆರಂಭದಲ್ಲಿ ಖಚಿತ ಪಡಿಸಿತ್ತು. ಮೈಕ್ರೋಸಾಫ್ಟ್‌ನ ಅಜ್ಯೂರ್ ಕ್ಲೌಡ್ ಸೇವೆ ಬಳಸುವ ಕಂಪ್ಯೂಟರ್‌ಗಳಲ್ಲೇ ಸಮಸ್ಯೆ ಕಂಡು ಬಂದಿತ್ತು.

ಅಜ್ಯೂರ್ ಸೇವೆ ಕುಸಿತದಿಂದ ಹಲವಾರು ದೇಶಗಳಲ್ಲಿನ ವಿಮಾನ, ಚಿಲ್ಲರೆ ಮಾರಾಟ, ಬ್ಯಾಂಕ್ ಹಾಗೂ ಮಾಧ್ಯಮ ಸೇವೆಗಳಲ್ಲಿ ಸಮಸ್ಯೆಯಾಯಿತು.

ನಂತರ ಅಜ್ಯೂರ್ ಸೇವೆ ಕುಸಿತವಾಗಿದ್ದಕ್ಕೆ ಕ್ರೌಡ್‌ಸ್ಟ್ರೈಕ್‌ನ ಅಪಡೇಟ್ ಕಾರಣ ಎಂಬುದು ಸ್ಪಷ್ಟವಾಯಿತು. ವಿಂಡೋಸ್‌ನಲ್ಲಿ ಫಾಲ್ಕನ್ ಅಳವಡಿಸಿಕೊಂಡ ವರ್ಚ್ಯುಯಲ್ ಯಂತ್ರಗಳಲ್ಲಿ ಯಾವುದೇ ಸಮಸ್ಯೆ ಕಂಡು ಬರಲಿಲ್ಲ.

**ಟೆಕ್ ಪಾಠ :** ಶುಕ್ರವಾರದ ಸರಣಿ ಸಮಸ್ಯೆಗಳಿಂದ ಟೆಕ್ ವಲಯ ಪಾಠ ಕಲಿಯಬೇಕಿದೆ. ತಮ್ಮ ಎಲ್ಲಾ ಸೇವೆಗಳಿಗೆ ಒಂದೇ ತಂತ್ರಾಂಶ ಅವಲಂಬಿಸಬಾರದು ಎಂದು ಟೆಕ್ ವಲಯದ ಪರಿಣಿತರು ಹೇಳುತ್ತಿದ್ದಾರೆ.

ಒಂದು ಸೇವೆಯಲ್ಲಿ ವ್ಯತ್ಯಯವಾದರೂ, ಇನ್ನೊಂದು ಸೇವೆಯ ಮೂಲಕ ಕಾರ್ಯ ನಿರ್ವಹಣೆ ಮಾಡಲು ಸಾಧ್ಯವಾಗುವಂತಿರಬೇಕು. ಬ್ಯಾಕಪ್ ಸರ್ವರ್‌ಗಳು, ಪರ್ಯಾಯ ಡಾಟಾ ಸೆಂಟರ್ ಹಾಗೂ ಸಮಸ್ಯೆಯಾದಾಗ ಅವಲಂಬಿಸಬಹುದಾದ ಪರ್ಯಾಯಗಳಿಗೆ ತ್ವರಿತವಾಗಿ ತೆರಳುವಂತಿರಬೇಕು ಎಂದು ಅಭಿಪ್ರಾಯ ಪಡಲಾಗುತ್ತಿದೆ.

## ಬಾಂಗ್ಲಾ ಸಂತ್ರಸ್ತರಿಗೆ ಆಶ್ರಯದಲ್ಲಿ ರಾಜ್ಯಗಳ ಪಾತ್ರವಿಲ್ಲ

ನವದೆಹಲಿ, ಜು. 21 - ಬಾಂಗ್ಲಾದೇಶದ ಸಂತ್ರಸ್ತರಿಗೆ ಭಾರತದಲ್ಲಿ ಆಶ್ರಯ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಗಳು ಯಾವುದೇ ಪಾತ್ರ ಹೊಂದಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಬಾಂಗ್ಲಾದೇಶದಿಂದ ಬರುವ ಸಂತ್ರಸ್ತರಿಗೆ ಆಶ್ರಯ ಒದಗಿಸುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ ಕೆಲ ಗಂಟೆಗಳ ನಂತರ ಕೇಂದ್ರ ಸರ್ಕಾರದ ಮೂಲಗಳು ಪ್ರತಿಕ್ರಿಯೆ ನೀಡಿದೆ.

ಈ ವಿಷಯಗಳನ್ನು ಕೇಂದ್ರ ಸರ್ಕಾರ ನಿರ್ವಹಿಸುತ್ತದೆ ಹಾಗೂ ಇಂತಹ ಹೇಳಿಕೆಗಳು ಸಂಪೂರ್ಣವಾಗಿ ಅಪ್ರಸ್ತುತ ಎಂದು ಮೂಲಗಳು ಹೇಳಿದೆ.

ಕೊಲ್ಕತ್ತಾದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ಬಾಂಗ್ಲಾದೇಶದ ಸಂತ್ರಸ್ತರಿಗಾಗಿ ಪಶ್ಚಿಮ ಬಂಗಾಳದ ಬಾಗಿಲು ತೆರೆಯುವುದಾಗಿ ಹೇಳಿದ್ದರು.

# ಜಿಲ್ಲೆಯಲ್ಲಿ ವಾಡಿಕೆಗಿಂತ ಅಧಿಕ ಮಳೆ 12.30 ಲಕ್ಷ ರೂ.ಗಳಷ್ಟು ಹಾನಿ

ದಾವಣಗೆರೆ, ಜು.21- ಜಿಲ್ಲೆಯಲ್ಲಿ ಜು.19ರಂದು ಸುರಿದ ಮಳೆಯು ಸರಾಸರಿ 17.2 ಮಿ.ಮೀ ದಾಖಲೆ ನಿರ್ಮಿಸಿದ್ದು, ಈ ಅಧಿಕ ಮಳೆಯಿಂದಾಗಿ ಅಂದಾಜು 12.30 ಲಕ್ಷ ರೂ.ಗಳ ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 4.8 ಮಿ.ಮೀ ವಾಡಿಕೆಗೆ 18.9 ಮಿ.ಮೀ ಮಳೆಯಾದರೆ, ದಾವಣಗೆರೆ ತಾಲ್ಲೂಕಿನಲ್ಲಿ 3.3 ಮಿ.ಮೀ ವಾಡಿಕೆಗೆ 18.6 ಮಿ.ಮೀ ಮಳೆ ಸುರಿದಿದೆ. ಮತ್ತು ಹರಿಹರ ತಾಲ್ಲೂಕಿನಲ್ಲಿ 1.9 ಮಿ.ಮೀ. ವಾಡಿಕೆಗೆ 20.6 ಮಿ.ಮೀ ಮಳೆ ಬಂದಿದೆ.

ಹೊನ್ನಾಳಿ ತಾಲ್ಲೂಕಿನಲ್ಲಿ 6.2 ಮಿ.ಮೀ ವಾಡಿಕೆಗೆ 23.3ಮಿ.ಮೀ ಮಳೆ ಸುರಿದಿದ್ದು, ಜಗಳೂರು ತಾಲ್ಲೂಕಿನಲ್ಲಿ 2.1 ಮಿ.ಮೀ ವಾಡಿಕೆಗೆ 5.6 ಮಿ.ಮೀ ಮಳೆ ದಾಖಲೆ ಮಾಡಿದೆ ಮತ್ತು ನ್ಯಾಮತಿ ತಾಲ್ಲೂಕಿನಲ್ಲಿ 7.2ಮಿ.ಮೀ ವಾಡಿಕೆಗೆ 26.2 ಮಿ.ಮೀ ಸರಾಸರಿ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 3 ಕಚ್ಚಾ ಮನೆಗಳಿಗೆ ಭಾಗಶ: ಹಾನಿಯಾಗಿದ್ದು ಅಂದಾಜು 90 ಸಾವಿರ ರೂ.ಗಳ ನಷ್ಟವಾಗಿದೆ ಮತ್ತು ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ ಕಚ್ಚಾ ಮನೆ ಸೇರಿದಂತೆ 4 ಮನೆಗಳು ಮತ್ತು ದನದ ಕೊಟ್ಟಿಗೆ ಹಾಳಾಗಿದ್ದು ಒಟ್ಟು ನಷ್ಟವನ್ನು 5.25 ಲಕ್ಷಕ್ಕೆ ಅಂದಾಜಿಸಲಾಗಿದೆ.

ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ 3 ಮನೆಗಳು ಭಾಗಶಃ ಹಾನಿಯಾಗಿದ್ದರಿಂದ 75 ಸಾವಿರ ರೂ.ಗಳ ನಷ್ಟವಾಗಿದೆ ಮತ್ತು ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 2 ಪಕ್ಕಾ ಮನೆ ಪೂರ್ಣ ಹಾನಿಯಾಗಿದ್ದನ್ನು 1.60 ಲಕ್ಷ ರೂ.ಗೆ ಅಂದಾಜಿಸಿದೆ. ಅಲ್ಲಿಯೇ 9 ಪಕ್ಕಾ ಮನೆಗಳು ಭಾಗಶಃ ಹಾನಿಯಾಗಿದ್ದರಿಂದ 3.80 ಲಕ್ಷ ರೂ.ಗಳ ನಷ್ಟ ಸಂಭವಿಸಿದೆ.

ಈ ಎಲ್ಲ ನಷ್ಟವನ್ನು ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

# ಗುರು ಭವಸಾಗರವ ದಾಟಿಸುವ ಹಡಗು



ಗುರುವೆಂದರೆ ಅಪಾರ ಶಕ್ತಿ, ಗುರುವನ್ನು ನಾವು ಹಗುರವಾಗಿ ಪರಿಗಣಿಸಬಾರದು, ಗುರುವಿಗೆ ಗುರುತರವಾದ ಶಕ್ತಿ ಇದೆ, ಅದಕ್ಕಾಗಿ ನಾವು ಪರಿಪೂರ್ಣವಾಗಿ ಆದರ, ಗೌರವ, ಶ್ರದ್ಧಾ ಭಕ್ತಿಯಿಂದ ಗುರುವಿನೊಂದಿಗೆ ವರ್ತಿಸಬೇಕು, ಗೌರವಿಸಬೇಕು, ಗುರು ಎಂದರೆ ಒಂದು ದೇಹವೇ ? ಖಂಡಿತಾ ಅಲ್ಲ ಅದೊಂದು ಭಾವಶಕ್ತಿ, ಕಾಲ ಕಾಲಕ್ಕೆ ತಕ್ಕಂತೆ ಅದು ಬೇರೆ-ಬೇರೆ ರೂಪಗಳಲ್ಲಿ ಪ್ರಕಟವಾಗುತ್ತದೆ, ಆದರೆ ಅದನ್ನು ಅರಿಯುವ ಪ್ರಯತ್ನ, ಎಲ್ಲಾ ಒಂದೇ ಅನ್ನುವ ಸ್ಥಿರ ಭಾವವನ್ನು ಶಿಷ್ಯರು ಹೊಂದಿರಬೇಕು, ಗುರು ವಾಕ್ಯದಲ್ಲಿ ದೃಢನಂಬಿಕೆ, ಆತ್ಮವಿಶ್ವಾಸ ಇಡಬೇಕು,

ಗುರುವಿಗಾಗಿ ಎಲ್ಲರೂ ಕಾಯಬೇಕು, ನಾವೆಲ್ಲರೂ ಗುರುವಿನ ಅಧೀನ, ಗುರುವಿಗಾಗಿ ಕಾಯುವುದರಿಂದ ನಮಗೇನು ಲಾಭ ? ಎಂದರೆ ನಮ್ಮ ಸಂಕಟದ ಸಮಯದಲ್ಲಿ, ನಮ್ಮ ದುಃಖದಲ್ಲಿ, ಕಷ್ಟದಲ್ಲಿ ಗುರುವು ನಮ್ಮನ್ನು ಕಾಯುತ್ತಾನೆ, ಈ ದೃಢ ನಂಬಿಕೆ ನಮಗಿರಬೇಕು, ಇದಕ್ಕಾಗಿ ಗುರುವಿನ ಕರುಣೆಗೆ, ಬರುವಿಕೆಗೆ, ಆಶೀರ್ವಾದಕ್ಕೆ ನಾವೆಲ್ಲ ಕಾಯಬೇಕು,

ಬರೆಯುವವನು, ಬರೆಸುವವನು ಅವನೇ ಆಗಿರುವಾಗ ನಮ್ಮ ಕೆಲಸ ಏನಿದೆ ? ಎಲ್ಲವೂ ಅವನಿಚ್ಛೆಯಂತೆ ನಡೆದಿರಲು, ನಮ್ಮ ಭವಸಾಗರವ ದಾಟಿಸುವ ಹಡಗು ಗುರುವು, ಗುರು ಸಿಕ್ಕಾಗ ಗುರಿ ತನ್ನಷ್ಟಕ್ಕೆ ತಾನೇ ಕಂಡು ಬರುತ್ತದೆ, ಸದ್ಗುರುವಿನ ಕೃಪೆಯಾದಾಗ ಎಲ್ಲವೂ ಸರಿಯಾಗುತ್ತದೆ, ಎಲ್ಲರನ್ನೂ ಒಂದಾಗಿಸಿ, ಸದಾ ಸತ್ ಚಿಂತನೆಯಲ್ಲಿ ಇರಿಸುವುದೇ ಗುರುವಿನ ಗುರಿ, ಅದನ್ನು ಮಾಡುವುದೇ ಒಂದು ಸಾಧನೆ,

***ಗುರು ಬ್ರಹ್ಮ ಗುರು ವಿಷ್ಣು***
***ಗುರುದೇವೋ ಮಹೇಶ್ವರ***
***ಗುರು ಸಾಕ್ಷಾತ್ ಪರಬ್ರಹ್ಮ***
***ತಸ್ಮೈ ಶ್ರೀ ಗುರುವೇ ನಮಃ***

ನಾವುಗಳು ಗುರುವಿನ ಆಶೀರ್ವಾದ ಪಡೆದು, ಸಾರ್ಥಕ ಜೀವನದ ಸದ್ಗುಣಿಗಳಾಗಬೇಕು, ಸದಾ ಸತ್ಕಾರ್ಯದಲ್ಲಿ ತೊಡಗಬೇಕು. ಸರಳ, ಸಜ್ಜನಿಕೆಯ ಸಾಕಾರ ಮೂರ್ತಿಗಳಾಗಬೇಕು, ಒಂದು ಸುಸಜ್ಜಿತ, ಸುಸಂಸ್ಕೃತ, ಸುಸಂಬದ್ಧ, ಸುವರ್ಣಮಯ ಕುಟುಂಬದ ಸದಸ್ಯರಾಗಬೇಕು, ಒಲವು-ನಿಲುವು, ಆಚಾರ--ವಿಚಾರ, ವ್ಯವಹಾರ--ವಿಹಾರಗಳಲ್ಲಿ ತಮ್ಮದೇ ಛಾಪನ್ನು ಒತ್ತಿ, ದಿಟ್ಟ ಹೆಜ್ಜೆ ಇಡುತ್ತಾ ಮುನ್ನಡೆಯಬೇಕು, ನಮ್ಮ ಕುಟುಂಬದ ಎಲ್ಲಾ ಸದಸ್ಯರ ಮನಗೆದ್ದು, ಪ್ರೀತಿ, ಶಾಂತಿ, ನಂಬಿಕೆ ಆತ್ಮವಿಶ್ವಾಸದಿಂದ ಕುಟುಂಬವನ್ನು ಉನ್ನತಿಯ ಕಡೆಗೆ ಕರೆದೊಯ್ಯಬೇಕು,

ಮಾನವನು ದಾನಿಯಾಗಿರಬೇಕು, ಧ್ಯಾನಿಯಾಗಿರಬೇಕು ಮತ್ತು ಜ್ಞಾನಿಯಾಗಿರಬೇಕು, ಈ ಮೂರೂ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕು, ಜೀವನದಲ್ಲಿ ಉನ್ನತವಾದದ್ದನ್ನು ಸಾಧಿಸಿ ಮಹಾನ್ ವ್ಯಕ್ತಿಗಳಾಗಬೇಕು,

ನಮ್ಮ ಬಾಳಿಗೆ ದೇವರು ಒಳ್ಳೆಯತನದ ಸಂಸ್ಕಾರ ದೀಕ್ಷೆ ನೀಡಿದ್ದಾನೆ. ಮೊಗ್ಗು ಹೂವಾಗಿ ಬಿರಿಯುವಲ್ಲಿ, ಕಾಯಿ ಹಣ್ಣಾಗಿ ಮಾರ್ಪಡುವಲ್ಲಿ, ಕಾಯಿಯ ಹಸಿರು ಹಳದಿಯಾಗಿ ಕಂಗೊಳಿಸುವಲ್ಲಿ, ಹುಳಿ ಸಿಹಿಯಾಗಿ ಪರಿವರ್ತನೆ ಯಾಗುವಲ್ಲಿ ಎಂತಹ ನೈಸರ್ಗಿಕ ಕ್ರಿಯೆ ಜರುಗುವುದೋ ಅಂತಹ ವ್ಯಕ್ತಿತ್ವವನ್ನು ನಾವು ರೂಢಿಸಿಕೊಳ್ಳಬೇಕು,

'ಸದುವಿನಯವೇ ಸದಾಶಿವ ನೊಲುಮೆಗೆ ಸಾಕ್ಷಿ', 'ಸದುವಿನಯದ ಅಡುಗೆ ಮಾಡಿರಿ', 'ಸದುವಿನಯವೇ ಸಂಪತ್ತು', ಎಂದು ಅರಿತು ನಾವುಗಳು ವಿನಯವಂತರಾಗಿ, ನಮ್ಮ ಕುಟುಂಬದ ಎಲ್ಲಾ ಸದಸ್ಯರನ್ನು ವಿನಯವಂತರನ್ನಾಗಿ ಮಾಡಬೇಕು,

ವಿನಯ ಗುಣ ವ್ಯಕ್ತಿಯ ಸ್ವಾಭಾವತಃ ಬಂದದ್ದಾದರೂ ವಿದ್ಯೆ, ಶಾಸ್ತ್ರ, ಜಾಣ್ಮೆ, ಗುರು ಕೃಪೆ ಮುಂತಾದವುಗಳ ಸಹಾಯದಿಂದ ಅದಕ್ಕೊಂದು ಮೆರುಗು ಮೂಡುತ್ತದೆ, ಅಂತಹ ಮೆರಗನ್ನು ನಾವು ಪಡೆಯಬೇಕು ,ದೇವರು ಹಾಗೂ ಗುರುವು ನಮ್ಮ ಈ ಭವಸಾಗರವನ್ನು ದಾಟಿಸಿ, ಉನ್ನತಿಯ ಕಡೆಗೆ ಕರೆದೊಯ್ಯಲಿ, ಜೀವನ್ಮುಕ್ತಿಯ ನೀಡಲಿ, ನಮ್ಮೆಲ್ಲರಿಗೂ ಇನ್ನೂ ಹೆಚ್ಚಿನ ಸಕಲ ಸಿರಿ ಸಂಪತ್ತನ್ನು, ಆಯುರಾರೋಗ್ಯವನ್ನು ಕರುಣಿಸಲಿ, ಶುಭವಾಗಲಿ, ಗುರುಭ್ಯೋ ನಮಃ

- **ಜೆಂಬಿಗಿ ಮೃತ್ಯುಂಜಯ**, ಕನ್ನಡ ಉಪನ್ಯಾಸಕರು, ದಾವಣಗೆರೆ





# ನಗರದಲ್ಲಿ ಸಂಭ್ರಮದ ಗುರು ಪೂರ್ಣಿಮೆ

**(1ನೇ ಪುಟದಿಂದ)** ನೆರವೇರಿಸಲಾಯಿತು.

ಪಿ.ಜೆ. ಬಡಾವಣೆ ಹಾಗೂ ಕಸ್ತೂರಬಾ ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲೂ ಸಹ ಗುರುರಾಯರಿಗೆ ವಿಶೇಷ ಪೂಜೆಗಳು ನಡೆದು, ವಿಶೇಷ ಅಲಂಕಾರ ಮಾಡಲಾಗಿತ್ತು.

ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನೆರವೇರಿತು.

ಜಯದೇವ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮ ಮಂದಿರ, ಶ್ರೀ ಗುರು ದತ್ತಾತ್ರೇಯ ದೇವಾಲಯದಲ್ಲಿ ಶ್ರೀ ಗುರು ದತ್ತಾತ್ತೇಯ ಸ್ವಾಮಿಯ 38ನೇ ವಾರ್ಷಿಕೋತ್ಸವ ಪ್ರತಿಷ್ಠಾಪನಾ ಸುಸ್ಮರಣ ಮತ್ತು 108ನೇ ಶ್ರೀ ಸತ್ಯದತ್ತ ವ್ರತ ಮಹೋತ್ಸವ ಕಾರ್ಯಕ್ರಮ ನೆರವೇರಿತು. ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಮತ್ತು ಗಾಯತ್ರಿ ಪರಿವಾರದಿಂದ ಜಯದೇವ ವೃತ್ತದಲ್ಲಿನ ಶ್ರೀ ಶಂಕರ ಮಠದಲ್ಲಿ ಗುರು ಪೂರ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ ನೆರವೇರಿತು. ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಹಾಗೂ ಸಿದ್ಧ ಸಮಾಧಿ ಯೋಗ ಸಂಯುಕ್ತಾಶ್ರಯದಲ್ಲಿ ಪಿ.ಬಿ. ರಸ್ತೆಯಲ್ಲಿರುವ ಗೀತಾ ಮಂದಿರದಲ್ಲಿ ಇಂದು ಗುರುಪೂರ್ಣಿಮೆ ಸಮಾರಂಭ ನೆರವೇರಿತು.

ವಿವೇಕಾನಂದ ಬಡಾವಣೆಯಲ್ಲಿ ಆರ್.ಎಸ್.ಎಸ್.ನ ವಿದ್ಯಾನಗರ ಶಾಖೆ ವತಿಯಿಂದ ಮಾಗನೂರು ಬಸಪ್ಪ ಶಾಲೆಯಲ್ಲಿ ಗುರು ಪೂರ್ಣಿಮೆ ಕಾರ್ಯಕ್ರಮ ನೆರವೇರಿಸಲಾಯಿತು. ಯಲ್ಲಮ್ಮ ನಗರದ ಶ್ರೀ ಸಿದ್ದಿ ವಿನಾಯಕ ಶಾಲೆಯಲ್ಲಿ ಆರ್.ಎಸ್.ಎಸ್ ವತಿಯಿಂದ ಗುರು ಪೂರ್ಣಿಮೆ ಮಹೋತ್ಸವ ಆಯೋಜಿಸಲಾಗಿತ್ತು.

## ಮರು ಆಯ್ಕೆ ಬೇಡವೆಂದ ಬಿಡೆನ್

**(1ನೇ ಪುಟದಿಂದ)** ಜೂನ್ ಅಂತ್ಯದಲ್ಲಿ ಡೆಮಾಕ್ರಾಟ್ ಪಕ್ಷದ ಬಿಡೆನ್ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯೂ ಆಗಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡುವೆ ನಡೆದ ಬಹಿರಂಗ ಚರ್ಚೆ, ಬಿಡೆನ್‌ಗೆ ಹಿನ್ನಡೆ ತಂದಿತ್ತು. ನಂತರ ಬಿಡೆನ್ ಸ್ಪರ್ಧೆಯಿಂದ ಹಿಂದೆ ಸರಿಯಬೇಕೆಂಬ ಒತ್ತಾಯ ಬಂದಿತ್ತು.

ಆದರೆ, ಸ್ಪರ್ಧೆಯಲ್ಲಿ ಮುಂದುವರೆಯುವುದಾಗಿ ಹೇಳುತ್ತಾ ಬಂದಿದ್ದರು. ಕೊನೆಗೂ ಒತ್ತಡಕ್ಕೆ ಮಣಿದಂತಿರುವ ಬಿಡೆನ್, ಸ್ಪರ್ಧೆಯಿಂದ ಹಿಂದೆ ಸರಿಯುವುದನ್ನು ಪ್ರಕಟಿಸಿದ್ದಾರೆ.

## ಕ್ಷಮೆ ಯಾಚಿಸಿದ ಸಿಇಒ

**(1ನೇ ಪುಟದಿಂದ)** ಅವಮಾನಿಸುವ ಉದ್ದೇಶ ಹೊಂದಿರಲಿಲ್ಲ ಎಂದು ಹೇಳಿದ್ದಾರೆ. ಮೀಸಲಾತಿ ವಿಧೇಯಕದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ನಿಗಮ್ ವಿರುದ್ಧ ಕನ್ನಡಪರ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿದ್ದವು.

## ನಾಳೆ ಸತತ ಏಳನೇ ಬಜೆಟ್ ಮಂಡಿಸಲಿರುವ ಸೀತಾರಾಮನ್




ನವದೆಹಲಿ, ಜು. 21 - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ದಾಖಲೆಯ ಸತತ ಏಳನೇ ಬಜೆಟ್ ಅನ್ನು ಮಂಗಳವಾರ ಮಂಡಿಸಲಿದ್ದಾರೆ. ಆ ಮೂಲಕ ಸೀತಾರಾಮನ್ ಅವರು ಮಾಜಿ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿ ಅವರ ದಾಖಲೆ ಮುರಿಯಲಿದ್ದಾರೆ.

2019ರಲ್ಲಿ ಸೀತಾರಾಮನ್ ದೇಶದ ಮೊದಲ ಮಹಿಳಾ ಹಣಕಾಸು ಸಚಿವೆಯಾಗಿ ನೇಮಕಗೊಂಡಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎರಡನೇ ಅವಧಿಗೆ ಆಯ್ಕೆಗೊಂಡ ನಂತರವೂ ಸೀತಾರಾಮನ್ ಹಣಕಾಸು ಸಚಿವಾಲಯದಲ್ಲಿ ಮುಂದುವರೆದಿದ್ದರು. ಕಳೆದ ಫೆಬ್ರವರಿಯಲ್ಲಿ ಹಂಗಾಮಿ ಬಜೆಟ್ ಮಂಡಿಸಿದ್ದರು.

ಈಗ 2024 - 25 ನೇ ಸಾಲಿನ ಪೂರ್ಣ ಬಜೆಟ್ ಅನ್ನು ಮಂಡಿಸಲಿದ್ದಾರೆ. ಇದು ಅವರ ಸತತ ಏಳನೇ ಬಜೆಟ್ ಆಗಿದೆ. ಈ ಹಿಂದೆ ದೇಸಾಯಿ ಅವರು 1959 ರಿಂದ 1964 ರ ನಡುವೆ ಐದು ಪೂರ್ಣ ಹಾಗೂ ಒಂದು ಹಂಗಾಮಿ ಬಜೆಟ್ ಮಂಡಿಸಿದ್ದರು.

## ನಗರದಲ್ಲಿ ನಾಳೆ ಸಿದ್ಧ ಕಣ್ಣಿನ ಹನಿ



ದಾವಣಗೆರೆ, ಜು. 21 - ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23ರ ಮಂಗಳವಾರ ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.


ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಪುಸ್ತಕ, ಬ್ಯಾಗ್ ವಿತರಿಸುವ ಮೂಲಕ ಜನ್ಮದಿನ ಆಚರಿಸಲಿರುವ ಪರಮೇಶ್ವರಪ್ಪ

**ರಾಣೇಬೆನ್ನೂರು**

ರಾಣೇಬೆನ್ನೂರು, ಜು. 21- ತುಮ್ಮಿನಕಟ್ಟಿ ಜಿಪಂ ಕ್ಷೇತ್ರ ವ್ಯಾಪ್ತಿಯ ತುಮ್ಮಿನಕಟ್ಟಿ, ಮಾಳನಾಯ್ಕನಹಳ್ಳಿ, ಲಿಂಗದಹಳ್ಳಿ, ಬಿಲ್ಲಹಳ್ಳಿ, ಮುದೇನೂರು, ಅಂತರವಳ್ಳಿ ಗ್ರಾಪಂಗಳ ಸರ್ಕಾರಿ ಹಾಗೂ ಅನುದಾನಿತ 5 ರಿಂದ 10 ನೇ ತರಗತಿಗಳ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಬ್ಯಾಗ್ ಕೊಡುವುದರೊಂದಿಗೆ ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷ ಪರಮೇಶಪ್ಪ ಗೂಳಣ್ಣನವರ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಸರ್ಕಾರ ಅಲಕ್ಷಿಸಿದ ಹೊಲಕ್ಕೆ ಹೋಗುವ ರಸ್ತೆ ರಿಪೇರಿ, ವಿವಿಧ ಕ್ಷೇತ್ರಗಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಪುರಸ್ಕಾರ, ಕೋವಿಡ್ ಸಂದರ್ಭದಲ್ಲಿ ವಿವಿಧ ಸಾವಿರಾರು ಬಡ ಜನರಿಗೆ ದಿನಸಿ ಕಿಟ್ ವಿತರಣೆ ಹೀಗೆ ಪ್ರತಿ ವರ್ಷ ಸಮಾಜ ಮುಖಿ ಚಿಂತನೆಗಳೊಂದಿಗೆ ಪರಮೇಶಪ್ಪ ಹುಟ್ಟುಹಬ್ಬ ಆಚರಿಸಿ ಕೊಳ್ಳುತ್ತಿದ್ದಾರೆ. ನಾಳೆ ದಿನಾಂಕ 22ರ ಸೋಮವಾರ ಸಿದ್ದೇಶ್ವರ ಸಮುದಾಯ ಭವನದಲ್ಲಿ ತಿಪ್ಪಾಯಿಕೊಪ್ಪದ ಶ್ರೀ ಮಹಾಂತ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಆಚರಿಸು ತ್ತಿರುವ ತಮ್ಮ ಹುಟ್ಟುಹಬ್ಬದಲ್ಲಿ ತಾಲ್ಲೂಕಿನಲ್ಲಿರುವ ಅವಿಭಕ್ತ ಕುಟುಂಬದ ಹಿರಿಯರನ್ನು ಹಾಗೂ ಡಿ ವರ್ಗದ ನೌಕರರನ್ನೂ ಸಹ ಗೌರವಿಸುತ್ತಿದ್ದಾರೆ.

# ಶಿವನು ಆದಿಯೋಗಿಯಾಗಿ ಸಪ್ತಋಷಿಗಳಿಗೇ ಗುರುವಾದ ಸುದಿನ... 'ಗುರು ಪೂರ್ಣಿಮೆ'



ಗುರು ಪೂರ್ಣಿಮೆ ಎಂಬುದು ಜಗತ್ತಿನ ಅನೇಕ ಭಾಗಗಳಲ್ಲಿ ಆಚರಿಸುವ ಗೌರವ ಪೂರ್ವಕವಾದ ಆಚರಣೆಯಾಗಿದೆ. ಅಧ್ಯಾತ್ಮಿಕವಾಗಿ ಇದನ್ನು ವ್ಯಾಸಪೂರ್ಣಿಮೆ ಎಂದು ಕರೆಯಲಾಗುತ್ತದೆ. ಜಗತ್ತಿನಲ್ಲಿ ವ್ಯಕ್ತಿಯೋರ್ವನನ್ನ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಶಕ್ತಿ ಇರುವುದೊಬ್ಬರಿಗೆ ಮಾತ್ರ ಅದು ಗುರು... ಬದುಕಿನ ಅಂಧಕಾರ ಓಡಿಸಿ, ಹಸನಾದ ಬದುಕು ರೂಪಿಸುವ ನಾವಿಕ ಗುರು... ಅಂತಹ ಗುರುವನ್ನು ಸ್ಮರಿಸುವ ಮೂಲಕ ಅವರ ಆದರ್ಶವನ್ನು ನಮ್ಮ ಬದುಕಲ್ಲಿ ರೂಢಿಸಿಕೊಳ್ಳುವುದೇ ಗುರು ಪೂರ್ಣಿಮೆ. ಇದು ಕೇವಲ ಅಧ್ಯಾತ್ಮಿಕವಾಗಿರದೆ ಶೈಕ್ಷಣಿಕವಾಗಿಯೂ ಪ್ರಾಮುಖ್ಯತೆ ಪಡೆದಿದೆ. ಬೌದ್ಧ ಧರ್ಮದಲ್ಲಿ ಬುದ್ಧನ ಮೊದಲ ಧಾರ್ಮಿಕ ಉಪದೇಶದ ಭಾಗವಾಗಿ ಗುರುಪೂರ್ಣಿಮೆ ಆಚರಿಸಲಾಗುತ್ತದೆ. ಯೋಗ ಸಂಪ್ರದಾಯದಲ್ಲಿ ಈ ದಿನವನ್ನು ಶಿವನು ಸಪ್ತರ್ಷಿಗಳಿಗೆ ಯೋಗ ವಿದ್ಯೆ ಧಾರೆ ಎರೆದು ಪ್ರಥಮ ಗುರುವಾದ ದಿನವಾಗಿ ಗುರು ಪೂರ್ಣಿಮೆ ಆಚರಿಸಲಾಗುತ್ತದೆ.

ಜೈನ ಧರ್ಮದಲ್ಲಿ ಮಹಾವೀರ ಜ್ಞಾನ ಪಡೆದು ಗಣಾಧರ ಎಂಬ ಶಿಷ್ಯ ಬಳಗ ಹೊಂದಿದ ದಿನವನ್ನಾಗಿ ಗುರು ಪೂರ್ಣಿಮೆ ಆಚರಿಸಲಾಗುತ್ತದೆ. ಈ ಎಲ್ಲಾ ಸಂಪ್ರದಾಯಗಳನ್ನು ಗಮನಿಸಿದಾಗ ಗುರು ಪೂರ್ಣಿಮೆ ಎನ್ನುವುದು ಜಗದ್ವಿಖ್ಯಾತ ಆಚರಣೆಯಾಗಿದೆ. ತತ್ವಜ್ಞಾನದ ಪ್ರಕಾರ ಗುರುವಿಲ್ಲದ ವಿದ್ಯಾರ್ಥಿಯನ್ನು ಅನಾಥ ಎಂದು ಸಂಬೋಧಿಸಲಾಗುತ್ತದೆ. ಸಾಧನೆ ಮಾಡಲು ಹೊರಟವನಿಗೆ ಗುರು ಮತ್ತು ಗುರಿ ಎರಡು ಅತ್ಯವಶ್ಯಕ. ಇಂದಿನ ದಿನಮಾನದಲ್ಲಿ ಗುರು-ಶಿಷ್ಯರ ಸಂಬಂಧ ಗಟ್ಟಿಯಾಗಿಲ್ಲ, ಯುವ ಪೀಳಿಗೆ ಗುರುವನ್ನು ಗೌರವಿಸುವ ಬದಲು ಅವಮಾನಿಸುವ ಘಟನೆಗಳನ್ನು ಕೇಳಿ ಮನಸ್ಸಿಗೆ ಘಾಸಿಯಾಗುತ್ತದೆ. ಇಲ್ಲಿ ಶಿಷ್ಯಬಳಗವನ್ನು ಸಮರ್ಥವಾಗಿ ನಿಭಾಸುವ ಕಲೆ ಶಿಕ್ಷಕರಾದವರಿಗೂ ಕರಗತವಾಗಬೇಕಿದೆ.

ಪ್ರತಿಯೊಬ್ಬರು ಜೀವನದಲ್ಲಿ ಒಬ್ಬರನ್ನು ಗುರು ಎಂದು ತಿಳಿದಿರುತ್ತಾರೆ. ಗುರು ಶಿಷ್ಯರ ಸಂಬಂಧ ಮಧುರವಾಗಿರಬೇಕು, ಜೊತೆಗೆ ಪರಸ್ಪರ ಗೌರವವಿರಬೇಕು.

**- ಶ್ರೀಮತಿ ಚೇತನಾ ಎಸ್. ಪರಪ್ಪನವರ**
ಉಪನ್ಯಾಸಕರು, ಜಿಹೆಚ್ ಕಾಲೇಜು ಹಾವೇರಿ.

# ಹರಿಹರ: ನದಿ ಪಾತ್ರದ ಜನ ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚನೆ





ಹರಿಹರ, ಜು. 21- ಭಾರೀ ಪ್ರಮಾಣದಲ್ಲಿ ಮಳೆ ಆಗುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ನದಿ ಪಾತ್ರದಲ್ಲಿ ವಾಸಿಸುವಂತಹ ಸಾರ್ವಜನಿಕರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ, ತಾಲ್ಲೂಕು ಆಡಳಿತಾಧಿಕಾರಿಗಳು ಸೂಚನೆ ನೀಡಿದ್ದಾರೆ.

ನಗರದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಧಾರಾಕಾರವಾಗಿ ಸುರಿಯುತ್ತಿರುವ ಮುಂಗಾರು ಮಳೆಯಿಂದಾಗಿ ಸೊಪ್ಪು, ಹಣ್ಣು, ಹೂವು ಸೇರಿದಂತೆ ಇತರೆ ವ್ಯಾಪಾರಸ್ಥರು, ರೈನ್ ಕೋಟ್ ಹಾಕಿಕೊಂಡು ವ್ಯಾಪಾರ ವಹಿವಾಟು ನಡೆಸಿದರು. ಇತ್ತ ಶಾಲಾ-ಕಾಲೇಜು ವಿದ್ಯಾರ್ಥಿಗಳು ಛತ್ರಿ ಹಿಡಿದುಕೊಂಡು ಓಡಾಡುತ್ತಿರುವುದು ಸಾಮಾನ್ಯವಾಗಿತ್ತು. ರಾಜ್ಯದ ಆಗುಂಬೆ, ಶೃಂಗೇರಿ, ತೀರ್ಥಹಳ್ಳಿ, ಶಿವಮೊಗ್ಗ ಸೇರಿದಂತೆ ಹಲವಾರು ನಗರಗಳಲ್ಲಿ ಭಾರೀ ಪ್ರಮಾಣದಲ್ಲಿ ಮಳೆ ಆಗುತ್ತಿರುವುದರಿಂದ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ.

## ವೈರಸ್ ಪ್ರಕರಣಗಳು ಪತ್ತೆ, ಐವರ ಸಾವು

**(1ನೇ ಪುಟದಿಂದ)** ಊತ ಉಂಟಾಗುತ್ತದೆ. ಈ ರೋಗವು ಸೊಳ್ಳೆ, ಉಣ್ಣೆ ಹಾಗೂ ಸ್ಯಾಂಡ್ ಫ್ಲೈ ಮೂಲಕ ಹರಡುತ್ತದೆ. ಈ ಹಿಂದೆ 2003-04 ರಲ್ಲಿ ಚಂಡಿಪುರ ವೈರಸ್ ರೋಗವು ಆಂಧ್ರಪ್ರದೇಶ ಮತ್ತು ಗುಜರಾತ್‌ನಲ್ಲಿ ಕಂಡು ಬಂದಿತ್ತು. ಕಳೆದ ಶುಕ್ರವಾರದಂದು ಗುಜರಾತ್, ರಾಜಸ್ಥಾನ ಹಾಗೂ ಮಧ್ಯಪ್ರದೇಶಗಳಲ್ಲಿ ಚಂಡಿಪುರ ವೈರಸ್ ಪ್ರಕರಣಗಳು ಕಂಡುಬಂದಿದ್ದವು.

## ಹರಿಹರ ಗಾಂಧಿನಗರದಲ್ಲಿ ಸಾಲು ಕಳ್ಳತನ

ಹರಿಹರ, ಜು.21- ನಿನ್ನೆ ತಡರಾತ್ರಿ ಇಲ್ಲಿನ ಗಾಂಧಿನಗರದ ಮೂರು ಮತ್ತು ನಾಲ್ಕನೇ ಕ್ರಾಸ್‌ನಲ್ಲಿರುವ ನಾಲ್ಕು ಮನೆಗಳ ಬೀಗ ಮುರಿದು ಬಂಗಾರ, ಬೆಳ್ಳಿ ಸೇರಿದಂತೆ ನಗದು ಹಣವನ್ನು ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ಮಹಮ್ಮದ್ ಸೋಹೆಲ್ ಎಂಬುವವರು ತಮ್ಮ ಮಕ್ಕಳನ್ನು ನೋಡಲು ಕುಮಾರಪಟ್ಟಣಂಗೆ ಹೋದ ಸಮಯದಲ್ಲಿ ಕಳ್ಳರು ಮನೆ ಬೀಗ ಮುರಿದು ಬೀರುವಿನಲ್ಲಿದ್ದ 57 ಸಾವಿರ ರೂ. ನಗದು ಮತ್ತು ನಾಲ್ಕು ಗ್ರಾಂ ಉಂಗುರ ಹಾಗೂ ಶೇಖ್ ಸ್ವಾಹನ್ ಮಕ್ಕಸೂದ್, ರಹೆಮತ್ ಬಿ, ಸಾವಿತ್ರಾ ಬಾಯಿ ಇವರುಗಳ ಮನೆಯಲ್ಲಿಯೂ ಕಳ್ಳತನ ಮಾಡಿದ್ದಾರೆ.

ನಂತರ ಇನ್ನೊಂದು ಮನೆಗೆ ನುಗ್ಗಿದ್ದು, ಆ ಮನೆಯಲ್ಲಿ ಏನೂ ಸಿಗದೇ ವಾಪಸ್ ಹೋಗಿದ್ದಾರೆ. ಸ್ಥಳಕ್ಕೆ ನಗರ ಠಾಣೆಯ ಸಿಪಿಐ ದೇವಾನಂದ್, ಪಿಎಸ್‌ಐ ಶ್ರೀಪತಿ ಗನ್ನಿ, ಕ್ರೈಮ್ ಪಿಎಸ್‌ಐ ವಿಜಯಕುಮಾರ್, ಬೆರಳಚ್ಚು ತಜ್ಞರು ಮತ್ತು ಶ್ವಾನದಳ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಭೇಟಿ ನೀಡಿದ್ದರು.

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್ ಹಾಗೂ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.
81238 95187
77604 84814

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ (ಟಾಪ್ ಲೊಕೇಶನ್) 50x80 ಪಶ್ಚಿಮ (ರೂ. 2460 ಅಡಿಗೆ) 40x60 ದಕ್ಷಿಣ (ರೂ. 60 ಲಕ್ಷ) 40x60 ಪಶ್ಚಿಮ (ರೂ. 62 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿ ವ್ಯಾಪಾರ. ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ನನ್ನದು

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 40x60 North, 40x60 South, 30x50 West, ಪಾರ್ಕ್ ಎದುರುಗಡೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ ಅಕ್ಕ-ಪಕ್ಕ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ ಅಕ್ಕ-ಪಕ್ಕ,
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನಿವೇಶನ ಮಾರಾಟಕ್ಕಿದೆ**
30x55 ಪೂರ್ವ ದಿಕ್ಕು, ಗ್ಲಾಸ್ ಹೌಸ್ ಹತ್ತಿರ. ಸಂಪರ್ಕಿಸಿ : ನಾಗರಾಜ್ : ಮಾಲೀಕರು
97419 24333
40 ಅಡಿ ರೋಡ್

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 9ನೇ ಮೇನ್, 2ನೇ ಕ್ರಾಸ್‌ನಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
99726 75765

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಆವರಗೆರೆ ಗ್ರಾಮದ ಉತ್ತಮ್ ಬಡಾವಣೆಯಲ್ಲಿ ಪೂರ್ವ ದಿಕ್ಕಿನಲ್ಲಿರುವ ಸೈಟ್ ನಂ. 34 ಅಳತೆ, 30x50ವುಳ್ಳ ಖಾಲಿ ಜಾಗ ಮಾರಾಟಕ್ಕಿದೆ. ನೇರವಾಗಿ ನಮ್ಮನ್ನು ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಿ.
99161 88947

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಸೈಟುಗಳು ಮಾರಾಟಕ್ಕಿವೆ**
SS 'A' Blockನಲ್ಲಿ ಅಥಣಿ ಕಾಲೇಜ್ ಹತ್ತಿರ 40x60 East, 30x50 East, ಕಮರ್ಷಿಯಲ್ ಸೈಟ್ 30x40 North, MB ಕಾಲೇಜ್ ರೋಡಿಗೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**TUITIONS PCMB/CS**
5th Std to 10th Std
Science, Maths
ಸಮೃದ್ಧಿ ಅಕಾಡೆಮಿ
96202 62361

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ವಧು ಬೇಕಾಗಿದೆ**
ಎರಡನೇ ಮದುವೆಗೆ
ವಿರುಪಾಕ್ಷಿ ಸಿ.ಎಸ್.
86184 74929

**ಬೇಕಾಗಿದ್ದಾರೆ**
Spoken English
ಕಲಿಸಬಲ್ಲಂತ ಶಿಕ್ಷಕಿಯರು ಪಾರ್ಟ್ ಟೈಮ್ ಆಗಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ಗಂಗೋತ್ರಿ ಹೆಲ್ತ್ ಅಲೈಡ್ ಕಾಲೇಜ್ (ರಿ)
ಗಾಂಧಿ ಸರ್ಕಲ್ .ಪಿ.ಬಿ ರೋಡ್. ಮೋತಿ ಸ್ವೀಟ್ಸ್ / ಟ್ರೆಂಡ್ ಪಕ್ಕ. ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು, ಫೀಲ್ಡ್ ವರ್ಕ್ ಮಹಿಳೆಯರು, ಪುರುಷರು ಸಹಾಯಕರು, ಹುಡುಗರು, ಹುಡುಗಿಯರು ಎಸ್ಸೆಸ್ಸೆಲ್ಸಿ ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
79750 23609

**ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ**
40x44 ಅಳತೆಯುಳ್ಳ ಗ್ರೌಂಡ್ ಫ್ಲೋರ್, ಸೆಲ್ಲರ್ ಫ್ಲೋರ್ ಹಾಗೂ 4x6 ಅಳತೆಯುಳ್ಳ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ. #992, ಲಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-2, ಆಸಕ್ತರು ಸಂಪರ್ಕಿಸಿ
85533 24486

**ಬೇಕಾಗಿದ್ದಾರೆ**
ಪಿಯುಸಿ ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


**ನಿಮಗೆ ಮಂಡಿನೋವು ಇದೆಯೇ ?**
ಪ್ರತಿ ಬುಧವಾರ ಮತ್ತು ಶನಿವಾರ ಬೆಂಗಳೂರಿನ ಖ್ಯಾತ ವೈದ್ಯರಾದ ಡಾ|| ಅನಿಲ್ ಕುಮಾರ್ ಅವರು ಗ್ವಾಸಾಥೆರಪಿ ಹಾಗೂ ಟೆರಾಹರ್ಟ್ಸ್ ಥೆರಪಿ ಆಹಾರ ಪದ್ಧತಿ ಮೂಲಕ ಚಿಕಿತ್ಸೆ ನೀಡುವರು.
ಪುನಃಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 99169 33905

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಯುವಕ-ಯುವತಿಯರಿಗೆ ಒಂದು ಸದಾವಕಾಶ
ವಯೋಮಿತಿ : 20-35 ವರ್ಷ
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.
ಕೆಲಸದ ವಿವರ : ಚಿಕಿತ್ಸಾ ವಿಭಾಗಕ್ಕೆ ಥೆರಪಿಸ್ಟ್
(45 ದಿನಗಳ ಟ್ರೈನಿಂಗ್ ಉಚಿತವಾಗಿ ಕೊಟ್ಟು, ತದನಂತರ ನಮ್ಮಲ್ಲೆ ಸರ್ಟಿಫಿಕೇಟ್ ಕೊಟ್ಟು, ಸಂಬಳ ನೀಡಲಾಗುವುದು)
ಹೆಚ್ಚಿನ ಮಾಹಿತಿಗಾಗಿ
8618642929, 08192-252228

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(ರೂ. 1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**ಮಹಿಳೆ ಬೇಕಾಗಿದ್ದಾರೆ**
ದಿನದ 24 ಗಂಟೆಯೂ ಮನೆಯಲ್ಲೇ ಇದ್ದುಕೊಂಡು ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ.
73533 36533

**ಅಡಿಕೆ ಸಸಿಗಳು ದೊರೆಯುತ್ತವೆ**
ಉತ್ತಮ ತಳಿಯ ಅಡಿಕೆ ಸಸಿಗಳು ಯೋಗ್ಯ ದರದಲ್ಲಿ ದೊರೆಯುತ್ತವೆ. ಸಂಪರ್ಕಿಸಿ.
98441 22269, 86182 17245

**ಜನ ಆಶಾ ಸೌಹ್ ನಿಧಿ ಲಿಮಿಟೆಡ್**
ಪಿಗ್ಮಿ ಏಜೆಂಟರ್ ಬೇಕಾಗಿದ್ದಾರೆ
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF Health Insurance ಸೌಲಭ್ಯವಿರುತ್ತದೆ
99720 42558, 96864 12409

**ಬೇಕಾಗಿದ್ದಾರೆ**
ಪಾರ್ಟ್ ಟೈಮ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
88808 89806

**NEW HOUSE FOR SALE**
East Facing Main Door, 4 BHK With An Office Or Gym Room In The Parking Floor. Along With Lift, Parking Upto 3 Cars. Location : SS Layout `B' Block, Near Kunduwada Kere.
72048 08516, 96864 62502

**FLAT FOR SALE**
2BHK, SQ.FT : 1325
Flat for Lease, 3 BHK, SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

**DOUBLE BED ROOMS HOUSE FOR LEASE**
Ashoka Nagar. Near HP Gas Godown. Dvg.
Contact Immediately:
95356 10817

**REQUIRED**
Experienced, having tally and GST knowledge, Accountants are required to work in reputed Firms (5 Persons) And office boy are also required.
99000 22030
# 82/19, P.B. Road, Beside Wellness Stores, Opp : Renuka Mandidar, Davanagere

**SITE FOR SALE**
SIDDAGANGA LAYOUT, AVARAGERE NEW RING ROAD, 20X30, 30X40
CONTACT :
86609 98651
70265 08405

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ಪ್ರಾದೇಶಿಕತೆ - ರಾಷ್ಟ್ರೀಯತೆ ಪರಸ್ಪರ ಪೂರಕ ಪರಿಕಲ್ಪನೆಗಳು



### ನಗರದಲ್ಲಿನ ಸಂವಾದದಲ್ಲಿ ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ರಾಜೇಶ್ ಪದ್ಮಾರ್

ದಾವಣಗೆರೆ, ಜು. 21- ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆಗಳು ಪರಸ್ಪರ ಪೂರಕ ಪರಿಕಲ್ಪನೆಗಳು ಎಂದು ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ರಾಜೇಶ್ ಪದ್ಮಾರ್ ಹೇಳಿದರು.

ನಗರದ ಶಾಂತಿ ರಾಯಲ್ ಸಭಾಂಗಣದಲ್ಲಿ 'ವರ್ತಮಾನ' ಫೋರಂ ಫಾರ್ ಇಂಟಲೆಕ್ಚುಯಲ್ ಡಿಬೆಟ್ಸ್ (ದಾವಣಗೆರೆ) ಇವರ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ 'ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ' ಕುರಿತು ಮಾತನಾಡಿದರು.

ಪ್ರಾದೇಶಿಕತೆಯು ವಿಭಿನ್ನ ಧಾರ್ಮಿಕ ಅಥವಾ ಜನಾಂಗೀಯ ಗುಂಪುಗಳು ವಿಶಿಷ್ಟವಾದ ಗುರುತನ್ನು ಹೊಂದಿರುವ ಕೆಲವು ರಾಜ್ಯಗಳ ಗಡಿಗಳಲ್ಲಿ ಸಹಬಾಳ್ವೆ ನಡೆಸುವ ಸಂದರ್ಭಗಳನ್ನು ವಿವರಿಸುತ್ತದೆ. ರಾಷ್ಟ್ರೀಯತೆಯು ರಾಷ್ಟ್ರದೊಂದಿಗೆ ಗುರುತಿನ ಪ್ರಜ್ಞೆಯಾಗಿದೆ. ಇದೊಂದು ನಂಬಿಕೆ. ಪಂಥ ಅಥವಾ ರಾಜಕೀಯ ಸಿದ್ಧಾಂತವಾಗಿದ್ದು, ರಾಷ್ಟ್ರೀಯ ಗುರುತನ್ನು ಹೊಂದಿರುತ್ತದೆ ಎಂದರು.

ರಾಷ್ಟ್ರೀಯತೆಯು ಸಂಸ್ಕೃತಿ, ಭಾಷೆ ಮತ್ತು ಧರ್ಮದ ವಿಷಯದಲ್ಲಿ ಒಂದೇ ಗುರುತನ್ನು ಸ್ಥಾಪಿಸುವ ಮೂಲಕ ಏಕತೆಯನ್ನು ಖಚಿತಪಡಿಸುತ್ತದೆ. ಭಾರತ ಬಹುರೂಪಿ, ಬಹುತ್ವದ ಸಮಾಜವನ್ನು ಹೊಂದಿದೆ. ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆಗೆ ಪೂರಕವಾಗಿದ್ದು, ಒಂದಕ್ಕೊಂದು ಬೆಸೆಯುವ ಕೆಲಸ ಮಾಡುತ್ತದೆ ಎಂದು ಹೇಳಿದರು.

ಸಿನಿಮಾ, ಕ್ರೀಡೆ ಸೇರಿದಂತೆ ಎಲ್ಲಾ ರಂಗಗಳಲ್ಲೂ ರಾಷ್ಟ್ರೀಯತೆ ಬೆಸದುಕೊಂಡಿದೆ. ಪ್ರಾದೇಶಿಕತೆಯ ಸಮಾಜ ರಾಷ್ಟ್ರೀಯತೆಗೆ ಅಡಿಗಲ್ಲು. ಸೈನ್ಯದಲ್ಲೂ ಕೂಡ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆಯ ಸಂಗಮವನ್ನು ಕಾಣುತ್ತೇವೆ ಎಂದು ತಿಳಿಸಿದರು.

ದಾವಣಗೆರೆಯ 'ವರ್ತಮಾನ' ವೇದಿಕೆಯು ವೈಚಾರಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಬರುತ್ತಿದೆ. ಇದು 32 ನೇ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

'ವರ್ತಮಾನ' ಸದಸ್ಯ ಹೆಚ್.ಜೆ. ಪಂಚಾಕ್ಷರಿ ಅಧ್ಯಕ್ಷತೆ ವಹಿಸಿದ್ದರು. ನೇಹಾ ಚನ್ನಗಿರಿ ದೇಶಭಕ್ತಿ ಗೀತೆ ಹಾಡಿದರು. ವರ್ತಮಾನ ಸದಸ್ಯರಾದ ಆದಿತ್ಯ ಬೋಂದಾಡೆ ಸ್ವಾಗತಿಸಿದರು. ಪ್ರಸಾದ ಬಂಗೇರ ನಿರೂಪಿಸಿದರು. ನವೀನ್ ವಂದಿಸಿದರು.

ಮಾಜಿ ಮೇಯರ್ ಎಸ್.ಟಿ. ವೀರೇಶ್, ವಿಪಕ್ಷ ನಾಯಕ ಕೆ.ಪ್ರಸನ್ನ ಕುಮಾರ್, ಯೋಗ ಒಕ್ಕೂಟದ ಜಿಲ್ಲಾಧ್ಯಕ್ಷ ವಾಸುದೇವ ರಾಯ್ಕರ್, ನಿಂಚನ ನಿಂಗಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ನಾಳೆ ಗ್ರಾ.ಪಂ. ನೌಕರರ ಬೆಂಗಳೂರು ಚಲೋ

ಜಗಳೂರು, ಜು. 21 - ನಾಡಿದ್ದು ದಿನಾಂಕ 23 ರ ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಅನಿರ್ದಿಷ್ಟಾವಧಿ ಧರಣಿಗೆ ತಾಲ್ಲೂಕಿನಿಂದ 150ಕ್ಕೂ ಅಧಿಕ ಗ್ರಾ.ಪಂ. ನೌಕರರು ಭಾಗವಹಿಸಲಿದ್ದಾರೆ ಎಂದು ಸಿಐಟಿಯು ಸಂಯೋಜಿತ ಗ್ರಾ.ಪಂ. ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಮಹಾಂತೇಶ್ ಸಿದ್ದಮ್ಮನಹಳ್ಳಿ ತಿಳಿಸಿದ್ದಾರೆ.

ತಾಲ್ಲೂಕಿನಲ್ಲಿ ಒಟ್ಟು 263 ಜನ ಬಿಲ್ ಕಲೆಕ್ಟರ್, ಜವಾನರು, ನೀರಗಂಟಿಗಳನ್ನೊಳಗೊಂಡಂತೆ 263 ಜನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು. ಸೂಕ್ತ ಸಾಮಾಜಿಕ, ಆರ್ಥಿಕ, ಭದ್ರತೆಯಿಲ್ಲದೆ ಕೇವಲ ಸರ್ಕಾರದ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾ ಸೇವೆಗೈಯ್ಯುತ್ತಿದ್ದೇವೆ. ರೂ. 6000 ಪಿಂಚಣಿಗಾಗಿ ಆರೋಗ್ಯ ವಿಮೆಗಾಗಿ, ಕನಿಷ್ಟ ವೇತನ ರೂ. 31,000 ,ಇ - ಹಾಜರಾತಿ ವಾಪಸ್ಸಾತಿಗಾಗಿ, ಕರ ವಸೂಲಿಗಾರ, ಗಣಕಯಂತ್ರ ಸಹಾಯಕ ನೌಕರರ ನೇರ ನೇಮಕಾತಿಗೆ ಲೆಕ್ಕಸಹಾಯಕ, ಗ್ರೇಡ್ -2, ಗ್ರೇಡ್-1 ಕಾರ್ಯದರ್ಶಿ ಮತ್ತು ಪಿಡಿಓ ಹುದ್ದೆಗಳ ಮುಂಬಡ್ತಿ ಕೋಟಾ ಹೆಚ್ಚಳಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

# ರಂಗಭೂಮಿ ಬಗ್ಗೆ ಸಿಜಿಕೆಗೆ ಅಪಾರ ಆಸಕ್ತಿ



### ಪಾಂಡೋಮಟ್ಟಿ ಡಾ.ಗುರುಬಸವ ಸ್ವಾಮೀಜಿ

ದಾವಣಗೆರೆ, ಜು.21- ಅರ್ಥಶಾಸ್ತ್ರ ಉಪನ್ಯಾಸಕರಾಗಿದ್ದ ಪ್ರೊ.ಸಿ.ಜಿ. ಕೃಷ್ಣಸ್ವಾಮಿ (ಸಿಜಿಕೆ) ಅವರು ಕನ್ನಡ, ಸಂಸ್ಕೃತ, ರಂಗಭೂಮಿಯ ಬಗ್ಗೆ ಅಪಾರ ಆಸಕ್ತಿ ವಹಿಸಿದ್ದರು. ರಂಗ ಚಟುವಟಿಕೆಯನ್ನು ಜೀವಂತವಾಗಿಡುವುದರಲ್ಲಿ ಅವರ ಕೊಡುಗೆ ಅಪಾರವಾಗಿತ್ತು ಎಂದು ಪಾಂಡೋಮಟ್ಟಿ ವಿರಕ್ತಮಠದ ಡಾ.ಗುರುಬಸವ ಸ್ವಾಮೀಜಿ ಹೇಳಿದರು.

ನಗರದ ರೋಟರಿ ಬಾಲ ಭವನದಲ್ಲಿ ಕರ್ನಾಟಕ ರಂಗ ಪರಿಷತ್ತು, ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಸಿಜಿಕೆ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಟಿವಿ ಹಾವಳಿ ಮಧ್ಯೆ ಹಳ್ಳಿಗಾಡಿನ ಸೊಗಡು ಕಣ್ಮರೆಯಾಗುತ್ತಿದೆ. ಏತನ್ಮಧ್ಯೆಯೂ ಕಲಾವಿದರು ತಮ್ಮ ಕಷ್ಟಕಾರ್ಪಣ್ಯದ ನಡುವೆಯೂ ರಂಗಾಸಕ್ತಿಯನ್ನು ಉಳಿಸಿಕೊಂಡಿದ್ದಾರೆ. ಇಂತಹ ಬಡ ಕಲಾವಿದರಿಗೆ ಉತ್ತೇಜನ ಕೊಡಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಪ್ರಶಸ್ತಿ, ಪುರಸ್ಕಾರ ನೀಡುವ ಸರ್ಕಾರ, ಸಂಘ ಸಂಸ್ಥೆಗಳು ಮತ್ತು ಮಠಗಳ ಮೇಲೆ ಸಾಕಷ್ಟು ಒತ್ತಡ ಇರಲಿದೆ. ಪೈಪೋಟಿ ನಡೆಸುವವರು ಬಹಳ ಜನರಿರುತ್ತಾರೆ. ಆದರೆ, ಇಲ್ಲಿ ನಿಜವಾದ ಸಾಧಕರನ್ನು ಗುರುತಿಸಿ, ಪ್ರಶಸ್ತಿ ಕೊಡುತ್ತಿರುವುದು ಸಂತೋಷದ ವಿಚಾರ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ರಂಗಕರ್ಮಿ ಎಚ್.ಎಸ್. ದ್ಯಾಮೇಶ್ ಮಾತನಾಡಿ, ವಿಶ್ವಗುರು ಬಸವಣ್ಣನವರು ಒಂದು ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಅವರ ವಚನಗಳಲ್ಲಿ ಜಗತ್ತಿನ ಸಮಸ್ತ ಸಂಕಟಗಳಿಗೆ ಪರಿಹಾರ ದೊರೆಯಲಿದೆ. ಹಾಗಾಗಿ, ಅವರನ್ನು ಜಾಗತಿಕವಾಗಿ ಸಾಂಸ್ಕೃತಿಕ ನಾಯಕರೆಂದು ಪರಿಭಾವಿಸಬೇಕಾಗಿದೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಕಾರದ ಸದಸ್ಯ ಡಾ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಲಿಂಗಾಯತ ಧರ್ಮ ಕರ್ನಾಟಕಕ್ಕೆ ಅಲ್ಲದೆ ಭಾರತಕ್ಕೆ ಬೇಕಾದ ಧರ್ಮವಾಗಿದೆ.

ಬಸವಣ್ಣ ಸಾಂಸ್ಥಿಕ ನೆಲೆಯಿಂದ ಹೊರಬಂದು ನಮಗೆ ಜಂಗಮತ್ವ ಕಲಿಸಿದವರು. ಆದರೂ ಅವರನ್ನು ಸಾಂಸ್ಥೀಕರಿಸುವ ಪ್ರಯತ್ನ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಲಿಂಗಾಯತ ಮಠಗಳು ಬಸವಣ್ಣನನ್ನು ಗಂಭೀರವಾಗಿ ಅರ್ಥ ಮಾಡಿಕೊಂಡಿದ್ದರೆ ಕರ್ನಾಟಕದಲ್ಲಿ ಇಂದು ಕೋಮುವಾದಿ ರಾಜಕಾರಣ ಕಾಲಿಡುತ್ತಿರಲಿಲ್ಲ ಎಂದರು.

ಈ ವೇಳೆ ರಂಗಕರ್ಮಿ ಜಿ.ಎಚ್. ರುದ್ರೇಶ್ ಅವರಿಗೆ ಸಿಜಿಕೆ ಪ್ರಶಸ್ತಿ ಹಾಗೂ ವಿಭೂತಿ ಬಸವಾನಂದರಿಗೆ ಬಸವ ಜ್ಯೋತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಅವರನ್ನು ಸನ್ಮಾನಿಸಲಾಯಿತು.

ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂ.ಎಸ್. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಂಗಕರ್ಮಿ ಎನ್.ಎಸ್.ರಾಜು, ಜಿ.ಎಸ್. ಲಿಂಗರಾಜು ಇದ್ದರು. ಬಿ.ಇ. ತಿಪ್ಪೇಸ್ವಾಮಿ ಮತ್ತು ಸಂಗಡಿಗರು ಸುಗಮ ಸಂಗೀತ ಪ್ರಸ್ತುತ ಪಡಿಸಿದರು. ಬಿ.ಹನುಮಂತಚಾರಿ ಮತ್ತು ಸಂಗಡಿಗರು ವೀರಗಾಸೆ ಪ್ರದರ್ಶಿಸಿದರು.

# ಗಾಯತ್ರಿ ಸಿದ್ದೇಶ್ವರ ಸೋಲಿಗೆ ಲಗಾನ್ ಬಾಯ್ಸ್ ಟೀಂ ಕಾರಣವಲ್ಲ

ದಾವಣಗೆರೆ, ಜು.21- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರರ ಸೋಲಿಗೆ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರಗಾಲೀ, ಲಗಾನ್ ಬಾಯ್ಸ್ ಟೀಂ ಕಾರಣ ಎಂಬ ಆರೋಪ ಸಲ್ಲದು ಎಂದು ಹೊನ್ನಾಳಿ-ನ್ಯಾಮತಿ ಬಿಜೆಪಿ ಮಂಡಲ ಅಧ್ಯಕ್ಷ ಜಿ.ಕೆ. ಸುರೇಶ್ ಸ್ಪಷ್ಟನೆ ನೀಡಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೇಣುಕಾಚಾರ್ಯ, ರವೀಂದ್ರನಾಥ್ ಮತದಾರರಿಗೆ, ನಿಷ್ಠಾವಂತ ಕಾರ್ಯಕರ್ತರಿಗೆ ಪದೇ ಪದೇ ಅವಮಾನ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಅವರ ಅವಧಿಯಲ್ಲಿ ಪಕ್ಷವನ್ನು ಎಷ್ಟರಮಟ್ಟಿಗೆ ಸಂಘಟಿಸಿದ್ದಾರೆ. ಕಳೆದ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಜನ ಶಾಸಕರನ್ನು ಬಿಜೆಪಿಯಿಂದ ಗೆಲ್ಲಿಸಿದ್ದಾರೆ. ಹರಿಹರ ಕ್ಷೇತ್ರದಲ್ಲಿ ಬಿಜೆಪಿಗೆ ಎಷ್ಟು ಲೀಡ್ ಕೊಡಿಸಿದ್ದಾರೆ ಎಂಬುದನ್ನು ಬಹಿರಂಗವಾಗಿ ಸ್ಪಷ್ಪಡಿಸಲಿ ಎಂದು ಹೇಳಿದರು.

ಜಿಲ್ಲಾಧ್ಯಕ್ಷರಾಗಿದ್ದ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಸಚಿವ ಮಲ್ಲಿಕಾರ್ಜುನ್ ವಿರುದ್ಧವಾಗಲಿ ಮಾತನಾಡಿಲ್ಲ. ರೇಣುಕಾಚಾರ್ಯ ಅವರು ಏನೂ ಇಲ್ಲದೇ ಪಕ್ಷಕ್ಕೆ ಬಂದು, ಮೂರು ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿ, ನಾಯಕರಾಗಿ ಬೆಳೆಯುತ್ತಿದ್ದಾರೆ. ಇದನ್ನು ಸಹಿಸದೇ ಪದೇ ಪದೇ ಸುದ್ದಿಗೋಷ್ಠಿ ನಡೆಸಿ ನಿಂದಿಸುವುದರಿಂದ ದೊಡ್ಡ ನಾಯಕರಾಗಿ ಬೆಳೆಯುತ್ತೇವೆ ಎಂಬ ಭ್ರಮೆಯಲ್ಲಿ ಹನಗವಾಡಿ ವೀರೇಶ್ ಇದ್ದಾರೆ ಎಂದರು.

ಜಿಲ್ಲಾ ಬಿಜೆಪಿಯಲ್ಲಿನ ರೇಣುಕಾಚಾರ್ಯ ಅವರ ಬೆಳವಣಿಗೆ ಸಹಿಸದೇ ಹತಾಶ ಭಾವನೆಯಿಂದ ಪದೇ ಪದೇ ಅವರ ವಿರುದ್ಧ ನಿಂದಿಸುವುದು, ದೂರುವುದನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ರಾಜ್ಯದ ಮುಖಂಡರಿಗೆ ದೂರು ಸಲ್ಲಿಸಲಾಗುವುದು. ಕೆಲವರು ರೇಣುಕಾಚಾರ್ಯ ಅವರನ್ನು ಪಕ್ಷದಿಂದ ಅಮಾನತ್ತು ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಅವರಿಗೆ ತಾಕತ್ತು ಇದ್ದರೆ ಪಕ್ಷದಿಂದ ಉಚ್ಚಾಟಿಸಲಿ ಎಂದು ಗುಡುಗಿದರು.

ಚನ್ನಗಿರಿ ಬಿ. ಉಮೇಶ್ ಕುಮಾರ್ ಮಾತನಾಡಿ, ಬಿಜೆಪಿಯಲ್ಲಿನ ಆಂತರಿಕ ವಿಚಾರಗಳನ್ನು ಪದೇ ಪದೇ ಪತ್ರಿಕಾಗೋಷ್ಠಿಯ ಮೂಲಕ ಪ್ರಚಾರ ಮಾಡಿ ಪಕ್ಷದ ಮರ್ಯಾದೆಯನ್ನು ಹರಾಜು ಹಾಕುವ ಕೆಲಸ ನಡೆಯುತ್ತಿದೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮುಜುಗರ ಉಂಟು ಮಾಡಲಾಗುತ್ತಿದೆ. ಇದನ್ನು ಇಲ್ಲಿಗೇ ಅಂತ್ಯಗೊಳಿಸುವಂತೆ ಮನವಿ ಮಾಡಿದರು.

ರೇಣುಕಾಚಾರ್ಯ, ಮಾಡಾಳು ಮಲ್ಲಿಕಾರ್ಜುನ ಅವರಿಂದಾಗಿ ಗಾಯತ್ರಿ ಸಿದ್ಧೇಶ್ವರ ಸೋತಿಲ್ಲ. ಜಿಎಂಐಟಿ ಬಾಯ್ಸ್ ನ ಒಳ ಹೊಡೆತದಿಂದ ಸೋಲಾಗಿದೆ. ಪ್ರಾಮಾಣಿಕ ಕೆಲಸ ಮಾಡಿದ್ದರೆ, ಧರ್ಮಸ್ಥಳದ ಮಂಜುನಾಥನ ಸನ್ನಿಧಿಯಲ್ಲಿ ಗಂಟೆ ಹೊಡೆಯಲಿ ಎಂದು ಸಾವಾಲಾಕಿದ್ದಾರೆ. ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರದ ಅಭ್ಯರ್ಥಿಗಳ ಗೆಲುವಿಗೆ ಸಿದ್ದೇಶ್ವರ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ ಎಂದಾದರೆ ಗಂಟೆ ಹೊಡೆಯಲಿ. ಆಮೇಲೆ ಲೋಕಸಭಾ ಚುನಾವಣೆ ಬಗ್ಗೆ ಮಾತನಾಡಲಿ ಎಂದರು.

ಲೋಕಸಭಾ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ ಎಂದು ಬರೀ ಧರ್ಮಸ್ಥಳ ಅಲ್ಲ, ಎಲ್ಲಿ ಬೇಕಾದರೂ ಗಂಟೆ ಹೊಡೆಯುತ್ತೇವೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಕುಬೇರಪ್ಪ, ಉಮೇಶ್ ಹೊದಿಗೆರೆ, ಮಂಜಣ್ಣ, ಮಲ್ಲಿಕಾರ್ಜುನ್, ನಾಗರಾಜ್, ಕುಮಾರ್ ಉಪಸ್ಥಿತರಿದ್ದರು.

> ಜಿಎಂಐಟಿ ಬಾಯ್ಸ್ ಮಾಜಿ ಸಂಸದರಿಗೆ ತಪ್ಪು ಮಾಹಿತಿ ನೀಡಿ, ಗಾಯತ್ರಿ ಸಿದ್ದೇಶ್ವರರ ಸೋಲಿಗೆ ಕಾರಣರಾಗಿದ್ದಾರೆ. ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಪ್ರಾಮಾಣಿಕವಾಗಿ ಬಿಜೆಪಿ ಅಭ್ಯರ್ಥಿ ಪರ ಕೆಲಸ ಮಾಡಿದ್ದರೂ ಸಹ, ಸೋಲು ಅನುಭವಿಸಬೇಕಾಯಿತು. ಸೋಲಿನ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ.
>
> -ಜಿ.ಕೆ. ಸುರೇಶ್, ಅಧ್ಯಕ್ಷರು, ಹೊನ್ನಾಳಿ-ನ್ಯಾಮತಿ ಬಿಜೆಪಿ ಮಂಡಲ

# ನಗರದಲ್ಲಿ ಸಂಭ್ರಮದ ಗುರು ಪೂರ್ಣಿಮೆ




ದಾವಣಗೆರೆ, ಜು. 21 - ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಹಾಗೂ ಸಿದ್ಧ ಸಮಾಧಿ ಯೋಗ ಸಂಯುಕ್ತಾಶ್ರಯದಲ್ಲಿ ಪಿ.ಬಿ. ರಸ್ತೆಯಲ್ಲಿರುವ ಗೀತಾ ಮಂದಿರದಲ್ಲಿ ಗುರುಪೂರ್ಣಿಮೆ ಸಮಾರಂಭ ನಡೆಯಿತು.

ಬಸವನಗರ ಮೂಲೆಗದ್ದೆ ಸದಾಶಿವ ಆಶ್ರಮದ ಶ್ರೀ ಅಭಿನವ ಚನ್ನಬಸವ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎಸ್.ಎಸ್.ವೈ ಬ್ರಹ್ಮೋಪದೇಶಕರಾದ ರೇಣುಕಾ ಮಾತಾಜಿ, ಅಧ್ಯಾತ್ಮಿಕ ಚಿಂತಕ ಎಸ್.ಕೆ. ಬಸವರಾಜಪ್ಪ, ಚಿಗಟೇರಿ ಜಿಲ್ಲಾಸ್ಪತ್ರೆಯ ವೈದ್ಯ ಡಾ. ನಂದಕುಮಾರ್, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಟ್ರಸ್ಟ್ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ, ಕೃಷ್ಣಮೂರ್ತಿ, ಅಶೋಕ್ ಬಾದಾಮಿ ಉಪಸ್ಥಿತರಿದ್ದರು.



# ತುಂಗಭದ್ರಾ ನದಿ ವೀಕ್ಷಣೆಗೆ ಪ್ರವಾಸಿಗರ ದಂಡು

ಹರಿಹರ, ಜು.21- ಉತ್ತಮ ಮಳೆಯಿಂದಾಗಿ ನಗರದ ತುಂಗಭದ್ರಾ ನದಿಯಲ್ಲಿ ರಮಣೀಯವಾಗಿ ಹರಿಯುತ್ತಿರುವ ನೀರನ್ನು ವೀಕ್ಷಿಸಲು ಭಾನುವಾರವಾಗಿದ್ದ ಇಂದು ಜಿಲ್ಲೆಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದರು. ನದಿಯಲ್ಲಿ ಹರಿಯುತ್ತಿರುವ ನೀರಿನ ಬಳಿ ಕುಟುಂಬದ ಸದಸ್ಯರು ನಿಂತುಕೊಂಡು ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು.

ನದಿಯ ಕೆಲ ಭಾಗದಲ್ಲಿ ಹರಿಯುತ್ತಿರುವ ನೀರಿನ ಬಳಿ ಹೋಗಿ ಫೋಟೋ ತೆಗೆಸಿಕೊಳ್ಳುವ ನಾಗರಿಕರನ್ನು, ನದಿಯ ಒಳಗಡೆ ಹೋಗದಂತೆ ತಡೆಯಲು ಮತ್ತು ನದಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾರ್ - ಬೈಕ್ ಹೆಚ್ಚಾಗಿ ಟ್ರಾಫಿಕ್ ಜಾಮ್ ಆಗುತ್ತಿರುವುದನ್ನು ತಡೆದು ವಾಹನಗಳು ಸರಾಗವಾಗಿ ಓಡಾಡುವುದಕ್ಕೆ ದಾರಿಮಾಡುವಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹರ ಸಾಹಸ ಪಟ್ಟರು.

ಜನರು ನದಿಯಲ್ಲಿ ಚಿಕ್ಕ ತೆಪ್ಪದಲ್ಲಿ ಕುಳಿತುಕೊಂಡು ನದಿಯ ಮಧ್ಯದಲ್ಲಿ ಹೋಗಿ ಸಂಭ್ರಮಸಿದ್ದು ಕಂಡುಬಂದಿತು.

ನದಿ ವೀಕ್ಷಿಸಲು ಆಗಮಿಸಿದ ಪ್ರವಾಸಿಗರು ಇಂದು ಹುಣ್ಣಿಮೆಯಾಗಿದ್ದರಿಂದ ನದಿ ದಂಡೆಯ ಮೇಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠ, ಆಂಜನೇಯ ಸ್ವಾಮಿ, ಅಯ್ಯಪ್ಪ ಸ್ವಾಮಿ, ಹರಿಹರೇಶ್ವರ ಸ್ವಾಮಿ ಹಾಗೂ ದರ್ಗಾಗಳಿಗೆ ಭೇಟಿಕೊಟ್ಟು ದೇವರ ಆಶೀರ್ವಾದ ಪಡೆದರು.

ನದಿಯ ಹತ್ತಿರ ಶೇಂಗಾ, ಐಸ್ ಕ್ರೀಂ, ಕಾರ - ಚಕ್ಕಲಿ, ಪೇರಲ ಕಾಯಿ, ಬಟಾಣಿ, ಕಾರ - ಮಂಡಕ್ಕಿ ಸೇರಿದಂತೆ ಸ್ನ್ಯಾಕ್ಸ್ ವ್ಯಾಪಾರ ವಹಿವಾಟು ಬಹಳಷ್ಟು ಜೋರಾಗಿ ನಡೆಯಿತು.

ಈ ಸಂದರ್ಭದಲ್ಲಿ ಪಿಎಸ್‌ಐ ಶ್ರೀಪತಿ ಗಿನ್ನಿ, ಎಎಸ್‌ಐ ಮನ್ಸೂರ್ ಅಹ್ಮದ್, ಪೊಲೀಸ್ ಇಲಾಖೆಯ ಸಿಬ್ಬಂದಿಗಳಾದ ಕೆ.ಮಂಜುನಾಥ್, ದೇವರಾಜ್, ಜಗದೀಶ್, ಸತೀಶ್, ದುಗ್ಗೇಶ್ ದಾವಣಗೆರೆ, ರಿಜ್ವಾನ್, ನಾಗರಾಜ್, ಇತರರು ಹಾಜರಿದ್ದರು.

# ನಗರದ ಅಕ್ಕಮಹಾದೇವಿ ಸಮಾಜದಲ್ಲಿ ಇಂದು ಹುಣ್ಣಿಮೆ ಕಾರ್ಯಕ್ರಮ



ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಹುಣ್ಣಿಮೆ ಕಾರ್ಯಕ್ರಮದ ಅಂಗವಾಗಿ ಗುರು ಪೂರ್ಣಿಮೆ ಹಾಗೂ ಫ.ಗು. ಹಳಕಟ್ಟಿಯವರ ಜಯಂತ್ಯೋತ್ಸವ ಕಾರ್ಯಕ್ರಮವು ಶ್ರೀ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ. ಗುರು ಪೂರ್ಣಿಮೆ ಕುರಿತು ಶ್ರೀಮತಿ ಮಂಜುಳ ಕಾಯಿ ಹಾಗೂ ಫ.ಗು ಹಳಕಟ್ಟಿ ಕುರಿತು ಸುಧಾ ಅಜ್ಜಂಪುರ ಮಾತನಾಡುವರು. ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಕೆ.ಕೆ. ಸುಶೀಲಮ್ಮ ಅಧ್ಯಕ್ಷತೆ ವಹಿಸಲಿದ್ದು, ನೀಲಗುಂದ ಜಯಮ್ಮ ಅವರು ಚಿಂತನ-ಮಂಥನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಶ್ರೀಮತಿ ಜ್ಯೋತ್ಸ್ನಾ ಶ್ರೀಕಂಠನ್ ಅವರು ಪ್ರಾತ್ಯಕ್ಷಿಕೆಯ ಪಾನೀಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಸಮಾಜದ ಕಾರ್ಯದರ್ಶಿ ಸುವರ್ಣ ದೊಗ್ಗಳ್ಳಿ ತಿಳಿಸಿದ್ದಾರೆ.

# ಕಾಂಬೋಡಿಯಾ, ಲಾವೋಸ್‌ನ ಸೈಬರ್ ಅಪರಾಧ ಜಾಲದಲ್ಲಿ ಸಿಲುಕಿದ್ದ ಭಾರತೀಯರ ರಕ್ಷಣೆ

ನವದೆಹಲಿ, ಜು. 21 - ಕಾಂಬೋಡಿಯಾದಲ್ಲಿ ಸೈಬರ್ ಅಪರಾಧಕ್ಕೆ ಸೆಳೆಯಲ್ಪಟ್ಟ 14 ಭಾರತೀಯರನ್ನು ರಕ್ಷಿಸಲಾಗಿದೆ. ಭಾರತೀಯ ರಾಯಭಾರಿ ಕಚೇರಿ ನೀಡಿದ ಮಾಹಿತಿ ಆಧರಿಸಿ ಇವರನ್ನು ರಕ್ಷಿಸಲಾಗಿದೆ. ಉದ್ಯೋಗ ನೀಡುವುದಾಗಿ ಆಮಿಷ ಒಡ್ಡಿ ಸೈಬರ್ ಅಪರಾಧದಲ್ಲಿ ತೊಡಗಿಸಲ್ಪಟ್ಟಿದ್ದ 650 ಕ್ಕೂ ಹೆಚ್ಚು ಭಾರತೀಯರನ್ನು ಇದುವರೆಗೂ ರಕ್ಷಿಸಿ ವಾಪಸ್ ಕರೆಸಲಾಗಿದೆ. ಈ ನಡುವೆ ಲಾವೋಸ್‌ನಲ್ಲಿ ಸೈಬರ್ ಅಪರಾಧ ವಂಚನಾ ಕೇಂದ್ರಗಳಲ್ಲಿ ಸಿಲುಕಿದ್ದ 13 ಭಾರತೀಯರನ್ನು ರಕ್ಷಿಸಿ ವಾಪಸ್ ಕರೆತರಲಾಗಿದೆ. ಇಲ್ಲಿನ ಭಾರತೀಯ ರಾಯಭಾರಿ ಕಚೇರಿಯು ಇದುವರೆಗೂ 518 ಭಾರತೀಯರನ್ನು ಲಾವೋಸ್ ಅಧಿಕಾರಿಗಳ ನೆರವಿನಿಂದ ರಕ್ಷಿಸಿದೆ.



# ಹರಿಹರದ ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷರಾಗಿ ರಜನಿಕಾಂತ್

ಹರಿಹರ, ಜು. 21 - ಹರಿಹರ ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷರನ್ನಾಗಿ ನಗರಸಭೆ ಸದಸ್ಯ ರಜನಿಕಾಂತ್ ರವರನ್ನು ಸಮಾಜದ ಹಿರಿಯರ ಸಮ್ಮುಖದಲ್ಲಿ ಸರ್ವಾನುಮತದೊಂದಿಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನಗರದ ಎ.ಕೆ ಕಾಲೋನಿಯ ಭಜನಾ ಮಂದಿರದಲ್ಲಿ ಸಮುದಾಯದ ಸಭೆಯಲ್ಲಿ ಮಾದಿಗ ಸಮುದಾಯದ ಮುಖಂಡರು ಸೇರಿ ಚರ್ಚಿಸಿ ಒಮ್ಮತದಿಂದ ನೂತನ ಅಧ್ಯಕ್ಷರನ್ನಾಗಿ ನಗರಸಭೆ ಸದಸ್ಯ ರಜನಿಕಾಂತ್ ಅವರನ್ನು ಆಯ್ಕೆ ಮಾಡಿದರು.

ಈ ವೇಳೆ ಮಾತನಾಡಿದ ಅಧ್ಯಕ್ಷ ರಜನಿಕಾಂತ್, ಸಮಾಜವು ಮುಖ್ಯವಾಹಿನಿಗೆ ಬರಬೇಕಾದರೆ ಮೊದಲು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕಿದೆ. ಈ ನಿಟ್ಟಿನಲ್ಲಿ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಸಭೆಯಲ್ಲಿ ನಗರದ ಹೃದಯ ಭಾಗದಲ್ಲಿರುವ ಹೋಲ್ ಸೇಲ್ ತರಕಾರಿ ಮಾರುಕಟ್ಟೆಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣ, ಸ್ಮಶಾನ, ವಿವಿಧ ಗ್ರಾಮಗಳಲ್ಲಿ ಕಟ್ಟಿಂಗ್, ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಮಾದಿಗ ಸಮಾಜದ ಮುಖಂಡ ಹಾಗೂ ಮಾಜಿ ದೂಡಾ ಸದಸ್ಯ ಜಿ.ವಿ. ವೀರೇಶ್ ಮಾತನಾಡಿ, ನಮ್ಮ ಸಮುದಾಯದ ಹಲವಾರು ಸಮಸ್ಯೆಗಳನ್ನು ನೂತನ ಅಧ್ಯಕ್ಷರು ಬಗೆಹರಿಸುವ ಮುಖಾಂತರ ಸಮಾಜದ ಏಳಿಗೆಗಾಗಿ ಶ್ರಮಿಸಬೇಕೆಂದು ಹೇಳಿದರು.

ಮತ್ತೋರ್ವ ಸಮಾಜದ ಮುಖಂಡ ನಾಗಭೂಷಣ್ ಮಾತನಾಡಿ, ಸಮಾಜದ ತಳ ಮಟ್ಟದ ವ್ಯಕ್ತಿಗೂ ಸಹ ಸರ್ಕಾರದಿಂದ ಸಿಗುವ ಸೌಲಭ್ಯಗಳು ದೊರಕಬೇಕು. ಸಮಾಜದ ಮಕ್ಕಳಿ ಗೋಸ್ಕರ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಗ್ರಂಥಾಲಯ, ಕಂಪ್ಯೂಟರ್ ಸೆಂಟರ್‌ಗಳನ್ನು ತೆರೆದು, ಅವರಿಗೂ ಸಹ ಶಿಕ್ಷಣ ನೀಡಲು ಸಹಾಯ ವಾಗುವ ರೀತಿಯಲ್ಲಿ ನಡೆಯಬೇಕು ಎಂದರು.

ನಗರಸಭೆ ಸದಸ್ಯ ಆಟೋ ಹನುಮಂತಪ್ಪ, ವಿರುಪಾಕ್ಷಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್‌ಬಿ ಹನುಮಂತಪ್ಪ, ಮರಿಯಪ್ಪ ನೋಟದವರ್, ಎಚ್. ಕರಿಲಿಂಗಪ್ಪ, ಮಹೇಶ್ ಮೋಟಾರ್, ಬಿಎಸ್ಪಿ ಜಿಲ್ಲಾಧ್ಯಕ್ಷ ಹನುಮಂತಪ್ಪ, ದಲಿತ ಮುಖಂಡ ಕೊಟ್ರೇಶ್, ಪತ್ರಕರ್ತರಾದ ಸುಧಾಕರ್ ಎಚ್, ಪಂಚಾಕ್ಷರಿ, ವಿಶ್ವನಾಥ್ ಮೈಲಾಳ ಹೊಳೆಸಿರಿಗೆರೆ, ರಾಜನಹಳ್ಳಿ ಮಂಜುನಾಥ್, ಭಾನುವಳ್ಳಿ ಬಸಣ್ಣ, ಸುಭಾಷ್ ಚಂದ್ರ ಬೋಸ್ ವಕೀಲರು, ನಗರಸಭೆ ನಾಮ ನಿರ್ದೇಶಿತ ಸದಸ್ಯ ಸಂತೋಷ್ ಪೂಜಾರ್, ಡಿಎಸ್‌ಎಸ್ ಮುಖಂಡರುಗಳಾದ ಹನುಮಂತಪ್ಪ ಪೈಲ್ವಾನ್, ಹುಲುಗಪ್ಪ, ಕೊಪ್ಪಳ ಮಂಜುನಾಥ್, ದೇವೇಂದ್ರಪ್ಪ ಎಚ್, ಕೃಷ್ಣ, ಮಂಜಪ್ಪ ರಾಜನಹಳ್ಳಿ, ವಿಶ್ವನಾಥ್ ರಾಜನಹಳ್ಳಿ, ಗ್ರಾಮ ಪಂಚಾಯತಿ ಮಾಜಿ ಸದಸ್ಯ ಪರಸಪ್ಪ ಧೂಳೆಹೊಳೆ, ಬಿಎಸ್ಪಿ ಮುಖಂಡ ಕೇಶವ್, ಪ್ರಭಾಕರ್ ವೈ, ದೇವರಬೆಳಕೆರೆ, ಗಂಗನರಸಿ, ಕುಣೆಬೆಳೆಕೆರೆ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಪ್ರವಾಹ ಭೀತಿ : ನದಿ ಪಾತ್ರವನ್ನು ಗಮನಿಸಿದ ಶಾಸಕ ಶಾಂತನಗೌಡ



ಹೊನ್ನಾಳಿ

ಹೊನ್ನಾಳಿ, ಜು.21- ಪಟ್ಟಣದ ತುಂಗಭದ್ರಾ ನದಿ ಪ್ರವಾಹ ಹಿನ್ನೆಲೆಯಲ್ಲಿ ಬಾಲರಾಜ್ ಘಾಟ್ ಹಾಗೂ ಬಂಬೂಬಜಾರ್ ಮುಳುಗಡೆಯ ಪ್ರದೇಶವನ್ನು ಶಾಸಕ ಡಿ.ಜಿ. ಶಾಂತನಗೌಡ ಅವರು ತಾಲ್ಲೂಕು ಅಧಿಕಾರಿಗಳೊಂದಿಗೆ ನಿನ್ನೆ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ವಾಡಿಕೆಗಿಂತ ಹೆಚ್ಚು ಮಳೆ ಆಗುತ್ತಿದೆ. ಹೊನ್ನಾಳಿ ಪಟ್ಟಣ ಸೇರಿದಂತೆ ಸಾಸ್ವೆಹಳ್ಳಿ ಪ್ರದೇಶಗಳಿಂದ ಹಾನಿಗೊಳಗಾಗಬಹುದಾದ 28 ಕುಟುಂಬಗಳಿಂದ 125 ಸಂತ್ರಸ್ಥರನ್ನು ಗುರುತಿಸಲಾಗಿದೆ. 13 ಮೀಟರ್ ನದಿ ಪಾತ್ರ ತಲುಪಿದರೇ ಮಾತ್ರ ಅಪಾಯ ಮಟ್ಟ ತಲುಪುತ್ತದೆ.

ಹೊನ್ನಾಳಿ ಪಟ್ಟಣದಲ್ಲಿ ಕಾಳಜಿ ಕೇಂದ್ರವನ್ನು ಅಂಬೇಡ್ಕರ್ ಭವನದಲ್ಲಿ ಹಾಗೂ ಸಾಸ್ವೆಹಳ್ಳಿ ಭಾಗದ ಸಂತ್ರಸ್ತರಿಗೆ ಸ್ವಾಮಿ ವಿವೇಕಾನಂದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ನಡೆಸಲಾಗಿದೆ ಎಂದರು.

ಕೃಷಿ ಹಾಗೂ ತೋಟಗಾರಿಕೆ ಹಾನಿ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಲಿರುವರು. ಈವರೆಗೆ ಹೊನ್ನಾಳಿಯಲ್ಲಿ ಒಂಭತ್ತು ಪಕ್ಕಾ ಮನೆ ಹಾನಿಯಾಗಿದ್ದು, ಒಂದು ದನದ ಕೊಟ್ಟಿಗೆ ಬಿದ್ದಿದೆ. ನ್ಯಾಮತಿಯಲ್ಲಿ 15 ಮನೆಗಳಿಗೆ ಹಾನಿಯಾಗಿದೆ.

ಇಂದಿನ ನದಿ ನೀರಿನ ಪ್ರಮಾಣವು 10.38 ಇದ್ದು ಆತಂಕ ಪಡುವಂತಿಲ್ಲ. ಆದರೂ, ಅಧಿಕಾರಿಗಳು ಮುಂಜಾಗ್ರತೆ ಕೈಗೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಅಭಿಷೇಕ್ ತಹಶೀಲ್ದಾರ್ ಪಟ್ಟರಾಜೇಗೌಡ, ನ್ಯಾಮತಿ ತಹಶೀಲ್ದಾರ್ ಗೋವಿಂದಪ್ಪ, ಇಒ ರಾಘವೇಂದ್ರ, ಉಪ ತಹಶೀಲ್ದಾರ್ ಚಂದ್ರಪ್ಪ, ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಇನ್ನಿತರರು ಉಪಸ್ಥಿತರಿದ್ದರು.

# ಪಿಂಜಾರ : ಅನುದಾನ ಬಿಡುಗಡೆಗೆ ಆಗ್ರಹ

ಪಿಂಜಾರ/ನದಾಫ್ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿ ಕರ್ನಾಟಕ ರಾಜ್ಯ ನದಾಫ್ / ಪಿಂಜಾರ್ ಸಂಘದಿಂದ ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ರಾಜ್ಯ ಘಟಕದ ಅಧ್ಯಕ್ಷ ಹೆಚ್. ಜಲೀಲ್ ಸಾಬ್ ತಿಳಿಸಿದ್ದಾರೆ.



# ಈ ಬಾರಿ ಹೆಚ್ಚು ಪ್ರದೇಶಗಳಲ್ಲಿ ಹರಡಿರುವ ನೀಟ್ ಸಾಧಕರು

ನವದೆಹಲಿ, ಜು. 21 - ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ - ಪಿಜಿ ಪರೀಕ್ಷೆಯಲ್ಲಿ 2,300ಕ್ಕೂ ಹೆಚ್ಚು ಅಭ್ಯರ್ಥಿಗಳು 700ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಇವರು 1,404 ಕೇಂದ್ರಗಳಿಗೆ ಸೇರಿದವರಾಗಿದ್ದಾರೆ. ಇವರಲ್ಲಿ ಸಾಕಷ್ಟು ಜನ ಸಾಂಪ್ರದಾಯಿಕ ಕೋಚಿಂಗ್ ತಾಣಗಳಿಗಿಂತ ಹೊರಗಿನವರಾಗಿದ್ದಾರೆ.

ಈ ಬಾರಿ ವೈದ್ಯಕೀಯ ಪ್ರವೇಶ ಪರೀಕ್ಷೆಗೆ 23 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇವರ ಪೈಕಿ 2,321 ಅಭ್ಯರ್ಥಿಗಳು 700 ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಇವರು 25 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 276 ನಗರಗಳಿಗೆ ಸೇರಿದವರು. 1404 ಕೇಂದ್ರಗಳ ಅಭ್ಯರ್ಥಿಗಳು ಈ ಉನ್ನತ ಸಾಧನೆ ಮಾಡಿದ್ದಾರೆ.

ಕಳೆದ ವರ್ಷದ ಪರೀಕ್ಷೆಗೆ ಹೋಲಿಸಿದರೆ ಈ ಬಾರಿ ಉನ್ನತ ಸಾಧನೆ ಮಾಡಿದವರು ಹೆಚ್ಚು ರಾಜ್ಯಗಳು ಹಾಗೂ ಕೇಂದ್ರಗಳಲ್ಲಿ ಹರಡಿಕೊಂಡಿದ್ದಾರೆ. ಕಳೆದ ವರ್ಷ 700ಕ್ಕೂ ಹೆಚ್ಚು ಅಂಕ ಗಳಿಸಿದವರು 310 ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದ್ದರು.

ಕೋಚಿಂಗ್ ಕೇಂದ್ರಗಳು ಹೆಚ್ಚಾಗಿರುವ ಶಿಕರ್, ಕೋಟ ಹಾಗೂ ಕೊಟ್ಟಾಯಂ ರೀತಿಯ ನಗರಗಳಲ್ಲಿ ಹೆಚ್ಚು ಫಲಿತಾಂಶ ಬಂದಿದೆ. ಆದರೂ, ಈ ನಗರಗಳ ಹೊರಗಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಉನ್ನತ ರ್‍ಯಾಂಕ್ ಗಳಿಸಿದವರು ಸಹ ಈ ಬಾರಿ ಹೆಚ್ಚು ಪ್ರದೇಶಗಳಿಗೆ ಹರಡಿದ್ದಾರೆ. ಮೊದಲ ನೂರು ರ್‍ಯಾಂಕ್ ಗಳಿಸಿದವರು 56 ನಗರಗಳ 95 ಕೇಂದ್ರಗಳಿಗೆ ಸೇರಿದವರಾಗಿದ್ದಾರೆ. 101 ರಿಂದ 1000 ರ್‍ಯಾಂಕ್ ಗಳಿಸಿದವರು 187 ನಗರಗಳ 706 ಕೇಂದ್ರಗಳಿಗೆ ಸೇರಿದವರಾಗಿದ್ದಾರೆ.

ನೀಟ್ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಶನಿವಾರ ನಗರವಾರು ಹಾಗೂ ಕೇಂದ್ರವಾರು ಫಲಿತಾಂಶವನ್ನು ಪ್ರಕಟಿಸಿತ್ತು. ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳು ಕೇಳಿ ಬಂದ ನಂತರ, ನಗರವಾರು ಹಾಗೂ ಕೇಂದ್ರವಾರು ಫಲಿತಾಂಶ ಪ್ರಕಟಿಸಲು ಸುಪ್ರೀಂ ಕೋರ್ಟ್ ಆದೇಶಿಸಿತ್ತು.

## ಭಾರತೀಯ ರೈತ ಒಕ್ಕೂಟದಿಂದ ಇಂದು ರೈತರ ಸಭೆ

ಭದ್ರಾ ಅಣೆಕಟ್ಟಿನಿಂದ ಅಚ್ಚುಕಟ್ಟು ಪ್ರದೇಶಗಳಿಗೆ ಮಳೆಗಾಲದ ಬೆಳೆಗೆ ನೀರು ಹರಿಸುವ ಬಗ್ಗೆ ಸಭೆ ಇಂದು ಮಧ್ಯಾಹ್ನ 12.30ಕ್ಕೆ ದಾವಣಗೆರೆಯ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಅವರ ಅಧ್ಯಕ್ಷತೆ ಯಲ್ಲಿ ನಡೆಯುವ ಈ ಸಭೆಗೆ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ಭಾಗವಹಿಸುವಂತೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್ ಅವರು ಕೋರಿದ್ದಾರೆ.

# ಶಿಷ್ಯರಿಗೆ ಬದುಕಿನ ಮಾರ್ಗದರ್ಶನ ನೀಡುವವ ಗುರು



ರಾಣೇಬೆನ್ನೂರು, ಜು.21- ಶಿಷ್ಯರ ಒಳಿತು, ಏಳ್ಗೆ ಬಯಸಿ ಅವರಿಗೆ ಸುಂದರ ಬದುಕು ಕಟ್ಟಿಕೊಳ್ಳಲು ಮಾರ್ಗದರ್ಶನ ಮಾಡುವವರೇ ಗುರುಗಳು.

ಪ್ರತಿಯೊಬ್ಬರಿಗೂ ಓರ್ವ ಗುರು ಇದ್ದೇ ಇರುತ್ತಾರೆ. ಗುರು ನೀಡುವ ಅರಿವು ಪ್ರತಿಯೊಬ್ಬರ ಬಾಳಿನಲ್ಲೂ ಬೆಳಕು ಮೂಡಿಸಲಿದೆ ಎಂದು ಉಜ್ಜಯಿನಿ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರು ನುಡಿದರು.

ಜಗದ್ಗುರುಗಳು ರಾಣೇಬೆನ್ನೂರು ಶ್ರೀ ಚನ್ನೇಶ್ವರ ಮಠದಲ್ಲಿ ಮೂರು ದಿನಗಳಿಂದ ನಡೆದ ಆಷಾಢ ಮಾಸದ ಇಷ್ಟಲಿಂಗ ಪೂಜೆ ಮತ್ತು ಜನ ಜಾಗೃತಿ ಸಮಾರಂಭದ ಕೊನೆಯ ದಿನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಆಕಾಶದಲ್ಲಿರುವ ಎಲ್ಲಾ ಮೋಡಗಳು ಮಳೆ ಸುರಿಸಲಾರವು. ಕೆಲವು ಕೇವಲ ಅಬ್ಬರಿಸುತ್ತವೆ. ಅದರಂತೆ ಎಲ್ಲಾ ಗುರುಗಳಿಂದಲೂ ಬದುಕಿನಲ್ಲಿನ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು. ಕೆಲ ಗುರುಗಳು ಕೇವಲ ಅಬ್ಬರಿಸಬಹುದು. ಗುರುವಿನಲ್ಲಿ ಬಲವಾದ ನಂಬಿಕೆ, ಶ್ರದ್ಧಾಭಕ್ತಿ ಇಟ್ಟವರಿಗೆ ಪರಿಹಾರ ಸಿಗಲಿದೆ. ಆ ದಿಸೆಯಲ್ಲಿ ಎಲ್ಲರೂ ಗುರುವಿನ ವಿಶ್ವಾಸ ಗಳಿಸಿ, ಬದುಕು ಸುಂದರಗೊಳಿಸಿಕೊಳ್ಳಿರಿ ಎಂದು ಜಗದ್ಗುರುಗಳು ನುಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಹೊನ್ನಾಳಿ ಹಿರೇಕಲ್ಮಠದ ಡಾ. ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ,

ಕಾರ್ಯಕ್ರಮದಲ್ಲಿ ಭಾಗವಹಿಸಿದರೂ ಸಹ ಅಲ್ಲಿ ಬಂದಿರುವ ಶ್ರೀಗಳ, ಪಂಡಿತರ, ಗಣ್ಯರ ಮಾತುಗಳನ್ನು ಆಲಿಸಿ ಅಲ್ಲಿರುವ ಉಪಯುಕ್ತವಾದವುಗಳ ಪಾಲನೆಯಿಂದ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ. ಅಲ್ಲೂ ಸಹ ನಿಮಗೆ ಗುರು ಸಿಗಲಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಅರುಣಕುಮಾರ ಪೂಜಾರ ಮಾತನಾಡಿ, ರಾಣೇಬೆನ್ನೂರು ಹೊನ್ನಾಳಿ ಶ್ರೀಗಳಿಗೆ ತವರು ಮನೆಯಂತಾಗಿತ್ತು. ಈಗ

### ರಾಣೇಬೆನ್ನೂರಿನಲ್ಲಿ ಉಜ್ಜಯಿನಿ ಜಗದ್ಗುರು

ಉಜ್ಜಯಿನಿ ಜಗದ್ಗುರುಗಳ ತವರು ಮನೆಯೇ ರಾಣೇಬೆನ್ನೂರಾಗಿದ್ದು, ನಾವೆಲ್ಲರೂ ಪುಣ್ಯವಂತರು ಎಂದು ಹೇಳಿ, ಉಜ್ಜಯಿನಿ ಮಠಕ್ಕೆ ಎಂಥದೇ ತೊಂದರೆ ಬಂದರೂ ಸಹ ರಾಣೇಬೆನ್ನೂರು ಜನರೆಲ್ಲರೂ ನಿಮ್ಮ ಜೊತೆಗಿದ್ದು, ಎದುರಿಸುತ್ತೇವೆ. ತಾವು ಯಾವ ಸಮಸ್ಯೆಗೂ ಅಂಜದಿರಿ ಎಂದು ಗುರುಗಳಿಗೆ ಅರುಹಿದರು.

ವೇದಿಕೆಯಲ್ಲಿ ಕಡೇನಂದಿಹಳ್ಳಿ ವೀರಭದ್ರ ಶ್ರೀಗಳು, ಜಗಳೂರು ಹಾಗೂ ನಾಗವಂದ ಶ್ರೀಗಳು ಭಾಗವಹಿಸಿದ್ದರು.

ಸಮಾರಂಭ ಸಮಿತಿಯ ಅಧ್ಯಕ್ಷ ಫಕ್ಕೀರೇಶ ಭಸ್ಮಾಂಗಿಮಠ, ಬಸವರಾಜ ಪಟ್ಟಣಶೆಟ್ಟಿ, ವಿ.ಪಿ.ಲಿಂಗನಗೌಡ, ಹಾಲೇಶ ಗೌಳಿ, ಶಂಭು ಷಡಾಕ್ಷರಿ ಮಠ, ಉಮ್ಮೇಶ ಗುಂಡಗತ್ತಿ, ಮತ್ತಿತರರಿದ್ದರು. ಕಸ್ತೂರಿ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

## ಬಿಐಇಟಿಗೆ ಎಂಟು ವಿಟಿಯು ರ್‍ಯಾಂಕ್



ದಾವಣಗೆರೆ, ಜು. 21 - ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2023-24ನೇ ಸಾಲಿನ ಇಂಜಿನಿಯರಿಂಗ್ ಪರೀಕ್ಷೆಗಳಲ್ಲಿ ಒಟ್ಟು 8 ರ್‍ಯಾಂಕ್ ಪಡೆದಿದ್ದಾರೆ.

ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಸಹನಾ ಗಂಗಾಧರ್ ನಾಯಕ್ ಪ್ರಥಮ ರ್‍ಯಾಂಕ್ ಪಡೆದು ವಿ.ಟಿ.ಯು. ಚಿನ್ನದ ಪದಕ ವಿಜೇತರಾಗಿದ್ದಾರೆ. ಪಿ.ಎಸ್. ಶ್ರಾವ್ಯ ಮತ್ತು ಬಿ.ಆರ್. ಹೇಮಾ ಅವರು ಕ್ರಮವಾಗಿ 2 ಮತ್ತು 4ನೇ ರ್‍ಯಾಂಕ್ ಪಡೆದಿದ್ದಾರೆ.

ಟೆಕ್ಸ್‌ಟೈಲ್ ವಿಭಾಗದಲ್ಲಿ ಡಿ.ಎಂ. ಪೂಜಾ ಇವರು ಪ್ರಥಮ ರ್‍ಯಾಂಕ್ ಪಡೆದು ವಿ.ಟಿ.ಯು. ಚಿನ್ನದ ಪದಕ ವಿಜೇತರಾಗಿದ್ದಾರೆ. ಪಿ. ಪ್ರೇರಣಾ ಅವರು 2ನೇ ರ್‍ಯಾಂಕ್ ಪಡೆದಿದ್ದಾರೆ.

ಬಯೋಟೆಕ್ನಾಲಜಿ ವಿಭಾಗದಲ್ಲಿ ಎಚ್.ಎಸ್. ಭಾವನಾ, ಎಸ್.ಎನ್. ನಯನ ಮತ್ತು ಸಿ.ಎಸ್. ಸಾತ್ವಿ ಅವರು ಕ್ರಮವಾಗಿ 5, 6 ಮತ್ತು 10ನೇ ರ್‍ಯಾಂಕ್ ವಿಜೇತರಾಗಿದ್ದಾರೆ.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕಳೆದ ವಾರ ಜರುಗಿದ 24ನೇ ಘಟಿಕೋತ್ಸವದಲ್ಲಿ ಪ್ರಥಮ ರ್‍ಯಾಂಕ್ ವಿಜೇತರು ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲ ಥಾವರ್ ಚಂದ್ ಗೆಹೋಟ್ ಅವರಿಂದ ಚಿನ್ನದ ಪದಕ ಪಡೆದಿದ್ದಾರೆ. ಇನ್ನುಳಿದ ರ್‍ಯಾಂಕ್ ವಿಜೇತರು ಕುಲಪತಿ ಡಾ. ಎಸ್. ವಿದ್ಯಾಶಂಕರ್ ಅವರಿಂದ ರ್‍ಯಾಂಕ್ ಪ್ರಮಾಣ ಪತ್ರ ಪಡೆದಿದ್ದಾರೆ.

## ಕುದಿಸಿ, ಆರಿಸಿದ ನೀರನ್ನು ಬಳಸಲು ಸೂಚನೆ

ಹರಿಹರ, ಜು. 21- ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿರುವ ಕಾರಣ ನದಿಯ ನೀರು ಕೆಸರಿನಿಂದ ಕೂಡಿರುತ್ತದೆ. ನೀರನ್ನು ಶುದ್ಧಗೊಳಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳುವುದರಿಂದ ನೀರು ಸರಬರಾಜಿನಲ್ಲಿ ವಿಳಂಬ ವಾಗುತ್ತದೆ. ನೀರಿನಲ್ಲಿ ಕೆಸರಿನಿಂದ ಟರ್ಬಿಡಿಟಿ ಪ್ರಮಾಣ ಹೆಚ್ಚಾದಲ್ಲಿ ನೀರನ್ನು ಶುದ್ಧಗೊಳಿಸುವ ಕಾರ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರು ಸಾಧ್ಯವಾದಷ್ಟು ನೀರನ್ನು ಸಂಗ್ರಹಿಸಿಕೊಳ್ಳಬೇಕು. ಕಡ್ಡಾಯವಾಗಿ ಕುದಿಸಿ, ಆರಿಸಿದ ನೀರನ್ನು ಕುಡಿಯಲು ಸೂಚಿಸಿದೆ.

ನೀರನ್ನು ವ್ಯರ್ಥ ಮಾಡದೇ ಮಿತವಾಗಿ ಬಳಸುವಂತೆ ಹರಿಹರ ನಗರಸಭೆ ಪೌರಾಯುಕ್ತರು ಕೋರಿದ್ದಾರೆ.

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ, www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ SEPT OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ದೋಧಾಮ್ ವಿಶೇಷ ಯಾತ್ರೆ OCT
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್
ವೈಷ್ಣೋದೇವಿ, ಕುಲುಮನಾಲಿ, ಆಗ್ರಾ, ಮಥುರಾ ಪ್ರವಾಸ
ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್, ವಾಘಾ ಬಾರ್ಡರ್, ದೆಹಲಿ, ಆಗ್ರಾ, ಕುರುಕ್ಷೇತ್ರ
NOV ಕಾಶಿ ಯಾತ್ರೆ
ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
DEC ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

ಹುಟ್ಟು ಹಬ್ಬದ ಶುಭಾಶಯಗಳು



ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷರು, ರಾಣೇಬೆನ್ನೂರು.
ಎಪಿಎಂಸಿ ಮಾಜಿ ನಿರ್ದೇಶಕರು, ನಮ್ಮ ಆತ್ಮೀಯರೂ ಆದ
ಶ್ರೀ ಪರಮೇಶಪ್ಪ ಬಸಪ್ಪ ಗೂಳಣ್ಣನವರ
ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು...
ಪರಮೇಶಪ್ಪ ಗೂಳಣ್ಣನವರ
ಅಭಿಮಾನಿಗಳು ಮತ್ತು ಹಿತೈಷಿಗಳು

ssims SPARSH CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 25ನೇ ಜುಲೈ 2024 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಸೊಸೈಟಿಯ ಉಪಾಧ್ಯಕ್ಷರಾದ
ಶ್ರೀ ಎನ್.ಜಿ. ಮೋಹನ್
ಇವರು ದಿನಾಂಕ : 21.07.2024ರ ಭಾನುವಾರ ನಿಧನರಾಗಿದ್ದು,
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ...
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಸಿಬ್ಬಂದಿ ವರ್ಗ
ಪಿಗ್ಮಿ ಸಂಗ್ರಹಕಾರರು ಹಾಗೂ ಸರ್ವ ಸದಸ್ಯರು
ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ.

ಎನ್.ಜಿ. ಮೋಹನ್ ನೀಲಗುಂದ ನಿಧನ



ದಾವಣಗೆರೆ 7ನೇ ಮೇನ್, 7ನೇ ಕ್ರಾಸ್ ಪಿ.ಜೆ. ಬಡಾವಣೆಯ ನಿವಾಸಿ
(ಶ್ರೀರಾಮ ಸ್ಟೋರ್ಸ್ ಮಾಲೀಕರು, ಸಿ.ವಿ. ಕಾಂಪ್ಲೆಕ್ಸ್, ದಾವಣಗೆರೆ)
ಎನ್.ಜಿ. ಮೋಹನ್ ನೀಲಗುಂದ
ಅವರು ದಿನಾಂಕ 21.7.2024ರ ಭಾನುವಾರ ಬೆಳಗಿನ ಜಾವ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 60 ವರ್ಷ ವಯಸ್ಸಾಗಿತ್ತು. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅಂದೇ ದಿನಾಂಕ 21.7.2024ರ ಭಾನುವಾರ ಸಂಜೆ 5ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಯಿತು.
ದುಃಖತಪ್ತರು : ಕುಟುಂಬ ವರ್ಗ, ಮೊ : 82771 89984, 98803 35888

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 21.07.2024ರ ಭಾನುವಾರ ನಿಧನರಾದ ಶ್ರೀರಾಮ ಸ್ಟೋರ್ಸ್ ಮಾಲೀಕರು, ಸಿ.ವಿ. ಕಾಂಪ್ಲೆಕ್ಸ್, ದಾವಣಗೆರೆ
ಶ್ರೀ ಎನ್.ಜಿ ಮೋಹನ್ ನೀಲಗುಂದ
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ದುಃಖತಪ್ತರು : ♦ ಡಿ. ವೆಂಕಟೇಶ್ ಕಾಟೆ ♦ ಪ್ರವೀಣ ಕುಮಾರ ಕಪೂರ್‌ಚಂದ್
♦ ವಿಮಲ್ ಕುಮಾರ್ ಆರ್. ಜೈನ್ ♦ ಶಂಕರ ಸುರ್ವೆ
♦ ಪರಶುರಾಮ್ ಸುರ್ವೆ ♦ ರಾಜು (ಎಮ್. ಜೈನ್) (ಜಗ್‌ಮಗ್)
♦ ವೈ. ಮಲ್ಲೇಶ್ ♦ ನ್ಯಾಮತಿ ಶಿವಕುಮಾರ್
ಶ್ರೀ ವರಸಿದ್ಧಿ ವಿನಾಯಕ ಸೇವಾ ಸಂಘ ಟ್ರಸ್ಟ್
ಗಡಿಯಾರ ಕಂಬ ಆವರಣ, ದಾವಣಗೆರೆ

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas